بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 03
ಸಂಚಿಕೆ: 50

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

15 ಡಿಸೆಂಬರ್ 2022, 15 ಫತಹ್ 1401 ಹಿಜರಿ ಶಮ್ಸಿ,
20 ಜಮಾದಿ ಉಲ್ ಅವ್ವಲ್ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاِمَّا يَنْزَغَنَّكَ مِنَ الشَّيْطٰنِ
نَزْغٌ فَاسْتَعِذْ بِاللّٰهِ ۭ
اِنَّهٗ سَمِيْعٌ عَلِيْمٌ ○

**(ಆಲ್ ಅಲ್‌ರಾಫ್ : 201)**

ಅಂದರೆ: ಶೈತಾನನಿಂದ ನಿನಗೇನಾದರೂ ಪ್ರಚೋದನೆಯುಂಟಾದರೆ ನೀನು ಅಲ್ಲಾಹನ ಅಭಯಯಾಚನೆ ಮಾಡು. ಖಂಡಿತವಾಗಿಯೂ ಅವನು ಎಲ್ಲವನ್ನು ಕೇಳುವವನೂ ತಿಳಿಯುವವನೂ ಆಗಿದ್ದಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸದಖ ನೀಡಲು, ಕರುಣಾಮಯಿಯಾಗಿರುವುದು ಮತ್ತು ಸಂಪತ್ತನ್ನು ಖರ್ಚು ಮಾಡುವ ಮಹತ್ವ

**(1436)** ಹಝ್ರತ್ ಹಕೀಮ್ ಬಿನ್ ಹಿಝಾಮ್(ರ) ಅವರು ವರದಿ ಮಾಡುತ್ತಾರೆ: ನಾನು ಹೇಳಿದೆ, ಯಾ ರಸೂಲಲ್ಲಾಹ್! ಇಸ್ಲಾಮ್‌ನ ಮುಂಚೆ ಜಾಹಿಲಿಯಾ ಕಾಲದಲ್ಲಿ ನಾನು ನನ್ನ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಂಡ ವಿಷಯಗಳು ನಿಮಗೆ ತಿಳಿದಿದೆ. ಅಂದರೆ ಸದಖ ನೀಡುವುದು ಅಥವಾ ಗುಲಾಮನನ್ನು ಮುಕ್ತಗೊಳಿಸುವುದು ಅಥವಾ ಕರುಣೆ ತೋರುವುದು. ಅವುಗಳಲ್ಲಿ ಏನಾದರೂ ಪ್ರತಿಫಲವಿದೆಯೇ? ಪ್ರವಾದಿ (ಸ) ಹೇಳಿದರು: ನೀವು ಮೊದಲು ಮಾಡಿದ ಒಳ್ಳೆಯ ಕಾರ್ಯಗಳ ಕಾರಣದಿಂದಲೇ ಇಸ್ಲಾಂ ಧರ್ಮವನ್ನು ಪ್ರವೇಶಿಸಿದ್ದೀರಿ.

**(1443)** ಹಝ್ರತ್ ಅಬು ಹುರೈರಾ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಅವರು ಹೇಳಿದರು: ಜಿಪುಣ ಮತ್ತು ಖರ್ಚು ಮಾಡುವವರ ಉದಾಹರಣೆಯು ಇಬ್ಬರು ವ್ಯಕ್ತಿಯಂತೆ. ಅವರಿಬ್ಬರು ಕಬ್ಬಿಣದ ಕವಚವನ್ನು ತಮ್ಮ ಎದೆಯಿಂದ ತಮ್ಮ ಕೊರಳವರೆಗೆ ಧರಿಸಿದ್ದಾರೆ. ಮತ್ತು ಖರ್ಚು ಮಾಡುವವನು ಖರ್ಚು ಮಾಡಿದಾಗಲೆಲ್ಲ ಅವನ ಆ ಕವಚವು ಹರಡುತ್ತಾ ಹೋಗುತ್ತದೆ ಅಥವಾ (ಅವರು ಹೇಳಿದರು) ಅದು ಎಲ್ಲಿಯು ವರೆಗೆ ಹರಡುತ್ತದೆ ಎಂದರೆ ಅವನ ಕಾಲ್ಬೆರಳುಗಳನ್ನು ಮರೆಮಾಡುತ್ತದೆ ಮತ್ತು ಅವನ ಪಾದಗಳ ಗುರುತುಗಳನ್ನು ಅಳಿಸುತ್ತದೆ. ಮತ್ತು ಜಿಪುಣ ವ್ಯಕ್ತಿಯು ಯಾವಾಗ ಖರ್ಚು ಮಾಡಲು ಬಯಸುವುದಿಲ್ಲವೊ ಆಗ ಪ್ರತಿಯೊಂದು ಕಡೆ ಅಂಟಿಕೊಂಡಿರುತ್ತಾನೆ. ಅವನು ಅದನ್ನು ವಿಸ್ತರಿಸಲು ಬಯಸುತ್ತಾನೆ, ಆದರೆ ಅದು ವಿಸ್ತರಿಸಲು ಸಾಧ್ಯವಾಗುವುದಿಲ್ಲ.

**(ಸಹೀಹ್ ಬುಖಾರಿ, ಸಂಪುಟ-3, ಕಿತಾಬ್ ಅಲ್-ರುಖಾತ್, 2008 ಖಾದಿಯಾನ್ ಪ್ರಕಟಿತ)**

## ಮಾರ್ಗದರ್ಶನ ಮತ್ತು ನಿಜವಾದ ತರಬೇತಿಯು ಅಲ್ಲಾಹನ ಕಾರ್ಯವಾಗಿದೆ

**ನನ್ನ ಪ್ರಕಾರ ಮಕ್ಕಳನ್ನು ಈ ರೀತಿ ಹೊಡೆಯುವುದು ಶಿರ್ಕ್ (ಬಹುದೇವಾರಾದನೆ) ಆಗಿದೆ ಕೆಟ್ಟ ವರ್ತನೆವುಳ್ಳವ ಹೊಡೆಯುವವನು ಮಾರ್ಗದರ್ಶನ ಮತ್ತು ಪ್ರಭುತ್ವದಲ್ಲಿ ತನ್ನನ್ನು ಪಾಲುಗಾರನನ್ನಾಗಿ ಮಾಡಿಕೊಳ್ಳಲು ಬಯಸಿದಂತಿದೆ.**

**ನಾನು ಯಾವಾಗಲೂ ನನಗಾಗಿ, ನಂತರ ನನ್ನ ಮನೆಯ ಜನರಿಗಾಗಿ ನಂತರ ನನ್ನ ಮಕ್ಕಳಿಗಾಗಿ, ನಂತರ ನನ್ನ ಪ್ರಾಮಾಣಿಕ ಸ್ನೇಹಿತರಿಗಾಗಿ ಮತ್ತು ನಂತರ ಈ ಸರಪಳಿಯೊಂದಿಗೆ ಸಂಬಂಧ ಹೊಂದಿರುವ ಎಲ್ಲರಿಗೂ ದುಆ ಮಾಡುತ್ತೇನೆ**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಮಕ್ಕಳನ್ನು ಹೊಡೆಯುವುದು ಶಿರ್ಕ್‌ನ ಭಾಗವಾಗಿದೆ

ಒಮ್ಮೆ ಸ್ನೇಹಿತರೊಬ್ಬರು ತನ್ನ ಮಗುವಿಗೆ ಹೊಡೆದರು. ಹಝ್ರತ್ ಮಸೀಹ್(ಅ) ಇದರಿಂದ ಬಹಳ ಪ್ರಭಾವಿತರಾದರು ಮತ್ತು ಅವರನ್ನು ಕರೆದು ಬಹಳ ನೋವಿನಿಂದ ಹೇಳಿದರು:

"ನನ್ನ ಪ್ರಕಾರ, ಮಕ್ಕಳನ್ನು ಈ ರೀತಿ ಹೊಡೆಯುವುದು ಶಿರ್ಕ್‌ನ ಭಾಗವಾಗಿದೆ. ಕೆಟ್ಟ ವರ್ತನೆವುಳ್ಳವನು, ಹೊಡೆಯುವವನು ಮಾರ್ಗದರ್ಶನ ಹಾಗೂ ಪ್ರಭುತ್ವದಲ್ಲಿ ತನ್ನನ್ನು ತಾನು ಪಾಲುಗಾರನನ್ನಾಗಿ ಮಾಡಿಕೊಳ್ಳಲು ಬಯಸುತ್ತಾನೆ. ಒಬ್ಬ ಭಾವೋದ್ರೇಕದಿಂದ ವ್ಯಕ್ತಿಯು ಯಾವುದಾದರು ವಿಷಯದ ಕುರಿತು ಯಾರನ್ನಾದರೂ ಶಿಕ್ಷಿಸಿದಾಗ, ಕೋಪಗೊಳ್ಳುವ ಮೂಲಕ ಶತ್ರುವಿನ ಬಣ್ಣವನ್ನು ಪಡೆಯುತ್ತಾನೆ ಮತ್ತು ಶಿಕ್ಷೆಯಲ್ಲಿ ಅಪರಾಧದ ಮಿತಿಯನ್ನು ಮೀರಿ ಹೋಗುತ್ತಾನೆ. ಒಬ್ಬ ವ್ಯಕ್ತಿಯು ತನ್ನ ಮೇಲೆ ನಿಯಂತ್ರಣ ಹೊಂದಿದ್ದರೆ, ಸಂಪೂರ್ಣವಾಗಿ ಸ್ವಾವಲಂಬಿಯಾಗಿದ್ದರೆ, ಸಹಿಷ್ಣುತೆ, ಶಾಂತ ಸ್ವಭಾವದವನಾಗಿದ್ದರೆ ಮತ್ತು ಗೌರವಾನ್ವಿತನಾಗಿದ್ದರೆ, ಸರಿಯಾದ ಸಮಯದಲ್ಲಿ ಮಗುವನ್ನು ಸ್ವಲ್ಪ ಮಟ್ಟಿಗೆ ಶಿಕ್ಷಿಸುವ ಹಕ್ಕನ್ನು ಅವನು ಹೊಂದಿರುತ್ತಾನೆ. ಆದರೆ ಕೊಪದಲ್ಲಿ ಮುಳುಗಿರುವ, ನೀಚ ಸ್ವಭಾವದ ಮತ್ತು ಅಜಾಗರೂಕ ಮನಸುಳ್ಳ ವ್ಯಕ್ತಿ ಎಂದಿಗೂ ಮಕ್ಕಳ ತರಬೇತಿಯಲ್ಲಿ ಅಸಡ್ಡೆ ತೋರುವುದು ಶಿಕ್ಷಾರ್ಹವಲ್ಲ. ಶಿಕ್ಷಿಸುವಲ್ಲಿ ಎಷ್ಟು ಹೆಚ್ಚು ಪ್ರಯತ್ನಗಳನ್ನು ಮಾಡಲಾಗುತ್ತದೆಯೋ ಅಷ್ಟು ಪ್ರಯತ್ನ ದುಆದಲ್ಲಿ ತೊಡಗಿಸಿಕೊಂಡರೆ ಎಷ್ಟು ಉತ್ತಮವಾಗುವುದು. ಹೃದಯಾಂತರಾಳದಿಂದ ಮಕ್ಕಳಿಗಾಗಿ ಪ್ರಾರ್ಥಿಸುವುದನ್ನು ಕಡ್ಡಾಯವಾಗಿಸಿಕೊಳ್ಳಬೇಕು. ಏಕೆಂದರೆ ಮಕ್ಕಳ ಪರವಾಗಿ ಪೋಷಕರ ಪ್ರಾರ್ಥನೆಯನ್ನು ವಿಶೇಷವಾಗಿ ಸ್ವೀಕರಿಸಲಾಗುತ್ತದೆ.

### ಹುಝೂರ್‌ರವರ ಕೆಲವು ದುಆಗಳು

ಅವರು ಹೇಳಿದರು: ನಾನು ಪ್ರತಿದಿನ ಕೆಲವು ದುಆಗಳನ್ನು ಮಾಡುತ್ತಿರುತ್ತೇನೆ. ಮೊದಲನೆಯದಾಗಿ, ಸರ್ವಶಕ್ತನಾದ ಅಲ್ಲಾಹನು ತನ್ನ ಗೌರವ ಮತ್ತು ಮಹಿಮೆಯನ್ನು ತೋರಿಸುವ ಕೆಲಸವನ್ನು ಮಾಡಲು ನನ್ನನ್ನು ಕರೆದೊಯ್ಯಲಿ ಮತ್ತು ಅವನ ಸಂತೋಷದ ಸಂಪೂರ್ಣ ತೌಫಿಕ್ ಅನ್ನು ನನಗೆ ನೀಡಲಿ ಎಂದು ನಾನು ನನ್ನ ಆತ್ಮಕ್ಕಾಗಿ ಪ್ರಾರ್ಥಿಸುತ್ತೇನೆ.

ಎರಡನೆಯದು: ನಾನು ನನ್ನ ಮನೆಯ ಜನರಿಗಾಗಿ ಪ್ರಾರ್ಥಿಸುತ್ತೇನೆ, ಅವರಿಂದ ನನಗೆ ಕಣ್ಣಿನ ತಂಪನ್ನು ಒದಗಿಸು ಮತ್ತು ಅವರೆಲ್ಲರು ಅಲ್ಲಾಹನ ಚಿತ್ತದ ಮಾರ್ಗವನ್ನು ಅನುಸರಿಸುವಂತಾಗಲಿ.

***(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)***

### *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.** **(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

# ಜಲ್ಸ ಸಾಲಾನದ ಭಾಗವಹಿಸುವಿಕೆಗೆ ಮಹತ್ವ ನೀಡಿ

**ಇಲ್ಲಿ ನಡೆಯುವಂತಹ ಎಲ್ಲಾ ಕಾರ್ಯಗಳು ದೇವ ಸಮ್ಮತಿ ಹೊಂದಿವೆ ಮತ್ತು ಇಸ್ಲಾಮಿನ ಮಹೋನ್ನತ ಸ್ಥಾನವನನು ಪ್ರದರ್ಶಿಸುವುದಾಗಿದೆ. ಈ ಸಂಘಟನೆಯ ಬುನಾದಿಯು ಅಲ್ಲಾಹನು ಸ್ವತಃ ತನ್ನ ಕೈಯಿಂದ ಇಟ್ಟಿರುವನು.**

ಹಿಂದಿನ ಸಂಚಿಕೆಯಲ್ಲಿ ನಾವು ಜಲ್ಸ ಸಾಲಾನದ ಮಹೋನ್ನತವಾದ ಆಧ್ಯಾತ್ಮಿಕ ಪ್ರಯೋಜನಗಳ ಕುರಿತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳನ್ನು ಪ್ರಸ್ತುತಪಡಿಸಿದ್ದೆವು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಜಲ್ಸ ಸಾಲಾನವನ್ನು ದೈವಿಕ ಜಲ್ಸ ಎಂದು ಕರೆದಿರುವರು. ಮತ್ತು ಅದಕ್ಕಾಗಿ ಪ್ರಯಾಣ ಬೆಳೆಸುವವರ ಕುರಿತು, ಅಲ್ಲಹ್ ಮತ್ತು ಅವನ ಪ್ರವಾದಿಗೋಸ್ಕರ ಅವರ ಮಾರ್ಗದಲ್ಲಿ ಪ್ರವಾಸ ಕೈಗೊಳ್ಳುವವನು ಎಂದು ಹೇಳಿರುವರು.

ಹಾಗೆ ಶೀರ್ಷಿಕೆಯಿಂದಲೇ ಸ್ಪಷ್ಟವಿದೆ. ಈ ಜಲ್ಸದ ಬುನಾದಿ ಅಲ್ಲಾಹನು ಸ್ವಯಂ ತನ್ನ ಕೈಯಿಂದ ಇಟ್ಟಿರುವನು. ಜಲ್ಸ ಸಾಲಾನದ ಅಗತ ಪ್ರಯೋಜನಗಳ ಕಾರಣ ಹಝ್ರತ್ ಮಸೀಹ್ ಮೌಊದ್(ಅ) ಜಲ್ಸ ಸಲಾನದಲ್ಲಿ ಭಾಗವಹಿಸಲು ತುಂಬಾ ಒತ್ತು ನೀಡಿದ್ದಾರೆ. ಈ ಕೆಳಗೆ ನಾವು ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಒಂದು ಅಧ್ಯಾಪನೆ, ಅದು ಜಲ್ಸದ ಆಧ್ಯಾತ್ಮಿಕ ಫಲಗಳ ಕುರಿತಾಗಿದೆ, ಅತ್ಯಂತ ಉತ್ತಮ ರೀತಿಯಲ್ಲಿ ಈ ಕುರಿತು ಬೆಳಕನ್ನು ಚೆಲ್ಲಿದ್ದಾರೆ. ಅವರು ನುಡಿಯುತ್ತಾರೆ.

ಈ ಜಲ್ಸವು ಅಲ್ಲಾಹನು ತನ್ನ ಇಚ್ಛೆಯನ್ವಯ ಹಝ್ರತ್ ಮಸೀಹ್ ಮೌಊದ್(ಅ) ಅವರ ಮೂಲಕ ಮನುಷ್ಯರ ಹೃದಯಗಳ ಮೇಲೆ ಶತಮಾನಗಳಿಂದ ಹಿಡಿದ ತುಕ್ಕನ್ನು ತೊಡೆದು ಹಾಕಲು ಮತ್ತು ಶತಮಾನಗಳಿಂದ ಆವರಿಸಿದ ಕತ್ತಲೆ ಅಂಧಕಾರಗಳನ್ನು ದೂರ ಮಾಡಿ ಅವರನ್ನು ಪ್ರಕಾಶದುನ್ನತ ಸ್ಥಾನಕ್ಕೆ ತಲುಪಿಸುವ ಮಹದುದ್ದೇಶದಿಂದ ಸ್ಥಾಪಿಸಿದ್ದಾನೆ. ಆದುದರಿಂದ ಈ ಸಂದರ್ಭದಲ್ಲಿ ಅಲ್ಲಾಹನು ಜನರನ್ನು ಶುದ್ಧಗೊಳಿಸಲು ಒಗ್ಗೂಡಿಸಬಯಸುತ್ತಾನೆ. (ಖುತ್ಬಾತೆ ಮಹ್ಮೂದ್, ಸಂಪುಟ-6, ಖುತುಬ ಜುಮುಅ 14-03-1919, ಮಸ್ಜಿದ್ ನೂರ್)

ಖಾದಿಯಾನ್ ದಾರುಲ್ ಅಮಾನ್ ಕುರಿತು ಸಯ್ಯುದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ.

ಈ ಸ್ಥಾನವನ್ನು ಅಲ್ಲಾಹನು ಶಾಂತಿಯ ಧಾಮವನ್ನಾಗಿ ಮಾಡಿದ್ದಾನೆ ಮತ್ತು ನಿರಂತರ ದಿವ್ಯ ಸ್ವಪ್ನ ಹಾಗೂ ದಿವ್ಯವಾಣಿಗಳ ಮೂಲಕ ಪ್ರಕಟಿಸಿದ್ದಾನೆ. ಯಾರೂ ಇದರೊಳಗೆ ಪ್ರವೇಶಿಸುವನು ಅವನು ಶಾಂತಿಯನ್ನು ಪಡೆಯುತ್ತಾನೆ. (ಮಲ್ಫೂಝಾತ್, ಸಂಪುಟ-3, ಪುಟ-347)

ಅವನು ಆಗಮಿಸಿದನು, ಅವನನ್ನು ನೋಡಲು
ಕಾತುರವಾಗಿ ಕಣ್ಣುಗಳು ಆಕಾಶದತ್ತ ನೋಡುತ್ತಿವೆ.
ವಾಗ್ದತ್ತ ಮಸೀಹನ ಖಾದಿಯಾನ್‌ಗೆ ಅಗಮಿಸಿರುವನು
ಹೀಗಾಗಿ ಖಾದಿಯಾನ್ ಶಾಂತಿಧಾಮವಾಗಿದೆ.

## ಖಾದಿಯಾನ್ ಸಂದರ್ಶಿಸಲು ಸಹಾಬರ ಕಾತುರ

ಕೆಳಗೆ ಒಂದು ವರದಿ ಸೀರತುಲ್ ಮಹದಿಯಿಂದ ವಿವರಿಸಲಾಗುವುದು. ಅದರಿಂದ ಖಾದಿಯಾನ್ ಸಂದರ್ಶಿಸಲು ಸಹಾಬರಿಗಿರುವ ಕಾತುರ ಬಗ್ಗೆ ತಿಳಿಯಬಹುದಾಗಿದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ) ಸೀರತುಲ್ ಮಹದಿಯಲ್ಲಿ ವರದಿ ನಂಬ್ರ 659 ರಲ್ಲಿ ವಿವರಿಸುತ್ತಾರೆ.

ಮುನ್ಶಿ ಅಬ್ದುಲ್ ಅಝೀಝ್ ಸಾಹಿಬ್ ಓಜಲ್ವಿ ಹೇಳುತ್ತಾರೆ. ನಾನು 1890ರ ಸಮೀಪ ಜಗತ್‌ಪುರ ಕೋಲ್ವಾಂ ಗ್ರಾಮ, ಗುರುದಾಸಪುರ ತಹಸೀಲದಲ್ಲಿ ಪಟವಾರಿಯಾಗಿದ್ದೆ. 91 ರಲ್ಲಿ ಪ್ರಯತ್ನಪಟ್ಟು ತನ್ನ ವರ್ಗಾವಣೆ ಸೇಖ್ವಾಂ ಗ್ರಮ ತಹಸೀಲ್ ಗುರುದಾಸಪುರಕ್ಕೆ ಮಾಡಿಸಿಕೊಂಡೆನು. ಆ ಸಮಯ ನಾನು ಅಹ್ಮದಿಯಾಗಿರಲಿಲ್ಲ. ಆದರೆ ಹಝ್ರತ್ ಸಾಹೇಬರ ಬಗ್ಗೆ ಕೇಳಿದ್ದೆ. ವಿರೋಧವೇನಿರಲಿಲ್ಲ. ಆದರೆ ಅಲ್ಲಿಯ ಉಲಮಾಅಗಳೆಲ್ಲ ಹಝ್ರತ್ ಸಾಹೇಬರಿಗೆ ವಿರೋಧಿಯಾಗಿರುವುದು ನನ್ನ ಭಾವನೆಗೆ ಅಡ್ಡ ಬರುತಿತ್ತು. ಸೇಖ್ವಾಂ ಹೋಗಿ ಮಿಯಾ ಜಮಾಲುದ್ದೀನ್, ಇಮಾಮುದ್ದೀನ್ ಹಾಗೂ ಖೈರುದ್ದೀನ್ ಅವರೊಡನೆ ಪರಿಚಯವಾಯಿತು. ಅವರು ನನಗೆ ಹಝ್ರತ್ ಸಾಹಿಬರ ಗ್ರಂಥ ಇಝಾಲ ಅವ್‌ಹಾಮ್ ಓದಲು ನೀಡಿದರು. ನಾನು ದುಆ ಮಾಡಿ ಓದಲು ಪ್ರಾರಂಭಿಸಿದೆ. ಅದರ ಅಧ್ಯಯನ ಮಾಡುತ್ತಾ ಮಾಡುತ್ತಾ ತನ್ನ ಮನಸ್ಸಿನಲ್ಲಿ ಹಝ್ರತ್ ಸಾಹಿಬರ ಸತ್ಯತೆ ಒಳಗೆ ನಾಟಿತು. ಮತ್ತು ಎಲ್ಲ ಆತಂಕ ಅವಿಶ್ವಾಸಗಳು ದೂರವಾದವು. ಅದರ ಕೆಲವೇ ದಿನಗಳ ನಂತರ ನಾನು ಮೊದಲ ಬಾರಿಗೆ ಮಿಯಾ ಖೈರುದ್ದೀನ್ ಅವರ ಜೊತೆಯಲ್ಲಿ ಖಾದಿಯಾನ್ ಹೋದೆ. ಗೋಲ್ ಕಮ್ರ (ದುಂಡಗಿನ ಕೊಣೆ) ಹತ್ತಿರ ಮೊದಲ ಬಾರಿಗೆ ಹಝ್ರತ್ ಸಾಹಿಬರ ದರ್ಶನವಾಯಿತು. ಹಝ್ರತ್ ಸಾಹಿಬರನ್ನು ನೋಡಿ ನಾನು ಮಿಯಾ ಖೈರುದ್ದೀನ್ ಸಾಹಿಬರಿಗೆ ಹೇಳಿದೆ. ಇದು ಸುಳ್ಳುಗಾರರ ಮುಖವಲ್ಲ. ಹಾಗೆ ನಾನು ಬೈಅತ್ ಮಾಡಿಕೊಂಡೆನು. ಬೈಅತ್ ಮಾಡಿದ ನಂತರ ಅತಿ ಹೆಚ್ಚು ಹಝ್ರತ್ ಸಾಹೇಬರ ಸೇವೆಯಲ್ಲಿ ಹಾಜರಾಗುತ್ತಿದ್ದೆ. ಬಹುಶಃ ಯಾವ ದಿನವೂ ಮಿಯಾ ಜಮಾಲುದ್ದೀನ್ ಅವರ ಜೊತೆ ಖಾದಿಯಾನ್‌ಗೆ ಬರದೇ ಇರುತ್ತಿರಲಿಲ್ಲ. ಅಂದರೆ ದಿನಾಲೂ ಖಾದಿಯಾನಿಗೆ ಬರುವುದು ನಮ್ಮ ಮಾಮೂಲು ಆಗಿಬಿಟ್ಟಿತ್ತು. ಎಂದಾದರೂ ಇಶಾಅ ನಮಾಝ್ ಸಮಯವು ನಮಾಝಿಗೆ ಬರುವ ಭಾವನೆ ಬಂದರೆ ನಾವು ನಾಲ್ವರು ಸಹ ಹೊರಟುಬಿಡುತ್ತಿದ್ದೆವು. ಎಷ್ಟೇ ಚಳಿಯಾಗಿರಲಿ ಕಾಲುವೆಯನ್ನು ದಾಟಿ ಖಾದಿಯಾನಿಗೆ ತಲುಪುತ್ತಿದ್ದೆವು. ನಮ್ಮ ಬಗ್ಗೆ ಯಾರಾದರೂ ಯಾವುದೇ ಕಾರಣದಿಂದ ಖಾದಿಯಾನಿಗೆ ಹೋಗಲು ಆಗದಿದ್ದರೆ, ಯಾರು ಹೋಗುತ್ತಿದ್ದರೋ ಅವರು ಮರಳಿ ಬಂದು ನಮಗೆಲ್ಲರಿಗೂ ಅಲ್ಲಿ ಆದ ಮಾತುಕತೆಗಳೆಲ್ಲವು ವಿವರಿಸುತ್ತಿದ್ದರು. ನಾನು ಹಝ್ರತ್ ಸಾಹಿಬರ ಸುಮಾರು ಪ್ರವಾಸಗಳಲ್ಲಿಯೂ ಭಾಗಿಯಾಗಿರುತ್ತಿದ್ದೆ. ಉದಾಹರಣೆಗೆ, ಸಿಯಾಲ್ಕೋಟ್, ಲಾಹೋರ್, ಗುರುದಾಸಪುರ, ಪಠಾಣಕೋಟ್ ಇತ್ಯಾದಿ. ಹಾಗೆ ಹಝ್ರತ್ ಖಲಿಫತುಲ್ ಮಸೀಹ್ ಪ್ರಥಮರು ನನ್ನ ಬಗ್ಗೆ ಹೇಳುತ್ತಿದ್ದರು. ಮಿಯಾ ಅಬ್ದುಲ್ ಅಜ್ಜೀರ್ಜ್ ಯಾವಾಗ ತಮ್ಮ ನೌಕರಿ ಕೆಲಸಕ್ಕೆ ಹೋಗುತ್ತಿದ್ದರು ಗೊತ್ತೇ ಆಗುತ್ತಿಲ್ಲ. ಏಕೆಂದರೆ ಅವರು ಯಾವಾಗಲೂ ಖಾದಿಯಾನಿನಲ್ಲೇ ಕಾಣಸಿಗುತ್ತಿದ್ದರು. (ಸೀರತುಲ್ ಮಹದಿ, ಸಂಪುಟ-01, ವರದಿ ಸಂಕ್ಯೆ-659, ಪುಟ-617, ಆವೃತ್ತಿ ಖಾದಿಯಾನ್ ಜುಲೈ 2008)

## ಈ ಸ್ಥಾನವನ್ನು ಅಲ್ಲಾಹನು ಗೌರವಿಸಿದ್ದಾನೆ.

ದೀರ್ಘ ಕಾಲದ ನಂತರ ಖಾದಿಯಾನಿಗೆ ಬಂದ ನನ್ನ ಸಂಬಂಧಿಕರೊಬ್ಬರಿಗೆ ನಾನು ಹೇಳಿದೆ. ಖಾದಿಯಾನಿಗೆ ಮತ್ತೆ ಮತ್ತೆ ಬರುತ್ತಾ ಇರಬೇಕು. ಅವರು ನನಗೆ ಕೇಳಿದರು. ಈಗಲೂ ಮಸೀಹ್ ಮೌಊದ್(ಅ) ಅವರು ಉಪಸ್ಥಿತರಿದ್ದ ಪುಣ್ಯ ದೊರಕಬಹುದೇ? ನಾನು ಹೇಳಿದೆ. ನಿಸ್ಸಂಶಯವಾಗಿಯೂ ಮಸೀಹ್ ಮೌಊದ್(ಅ) ಗತಿಸಿಹೋದರು. ಅದೇ ಪುಣ್ಯ ದೊರಕುತ್ತದೆ. ಆದರೆ ನಮ್ಮ ನಿಯತ್ತು ಮತ್ತು ನಿಷ್ಠೆಯ ಮೇಲೆ ಅವಲಂಬನೆಯಾಗಿರುತ್ತದೆ. ಮಸೀಹ್ ಮೌಊದ್(ಅ) ಗತಿಸಿ ಹೋದ ಕಾರಣ ಖಾದಿಯಾನಿನ ಪವಿತ್ರತೆ ಅಂತ್ಯಗೊಳ್ಳಲಿಲ್ಲ. ಅದು ಶಆಇರಅಲ್ಲಾಹ್ (ಅಲ್ಲಾಹನ ಪವಿತ್ರ ಸ್ಥಳಗಳಲ್ಲಿ) ಒಂದಾಗಿದೆ. ಅದರ ಅನುಗ್ರಹಗಳು ಮುಕ್ತಾಯಗೊಂಡಿಲ್ಲ.

ಖಾದಿಯಾನ್ ಮತ್ತು ಅದರ ಇತರ ಪವಿತ್ರ ಸ್ಥಳಗಳು ಈಗಲೂ ಮಖಾಮಾತೆ ಮುಖದ್ದಸ (ಶಆಇರಲ್ಲಾಹ್) ಅಲ್ಲಾಹನ ಪವಿತ್ರ ಸ್ಥಳಗಳಾಗಿವೆ. ಅಂತ್ಯ ತೀರ್ಮಾನದ ದಿನದವರೆಗೂ ಇರುವುದು, ಇದರ ಅನುಗ್ರಹಗಳು ಅಂತ್ಯ ದಿನದವರೆಗೂ ಇರುವುವು. ಯಾವ ಅಹ್ಮದಿ ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಲೀಫರುಗಳ ಧ್ವನಿ ಅನುಸರಿಸುತ್ತ ಜಲ್ಸಕ್ಕೆ ಹಾಜರಾಗುವರೋ ಅವರು ದಿಟವಾಗಿಯೂ ಅದಮ್ಯ ಪುಣ್ಯಗಳನ್ನು ಪಡೆಯುವರು. ಖಾದಿಯಾನ್ ಶಾಶ್ವತವಾದ ಅನುಗ್ರಹಗಳ ಕಾರುಣ್ಯಗಳ ಸ್ಥಳವಾಗಿದೆ. ಆ ಕುರಿತು ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ರವರ ಈ ಕೆಳಗೆ ನೀಡುವ ಅಧ್ಯಾಪನೆಗಳಿಂದ ಸ್ಪಷ್ಟವಾಗುತ್ತದೆ.

## ಖಾದಿಯಾನಿನ ಭೂಮಿ ಈ ಆದರಣೀಯವಾಗಿದೆ.........*...........ಜನನಿಬಿಡದಿಂದ ಅದು ಪವಿತ್ರಗೊಂಡಿದೆ

ಅದರ ಅರ್ಥ ಖಾದಿಯಾನಿನ ಈ ಭೂಮಿ, ಅಲ್ಲಾಹನ ಇಂಗಿತದ ಮೇರೆಗೆ ಜನರು ಇಲ್ಲಿ ಸೇರುತ್ತಾರೆ. ಇಲ್ಲಿ ಬಂದು ಸೇರುವುದು ಪವಿತ್ರಭೂಮಿ (ಕರ್ಮಭೂಮಿ) ಯಲ್ಲಿ ಪ್ರತಿವರ್ಷ ಸೇರುವ ರೀತಿಯಲ್ಲಿಯೇ ಆಗಿದೆ. ಈ ಸಮಾವೇಶ ಮಕ್ಕದ ಸಮಾವೇಶದಂತೆ ಆಗಿದೆ. ಆದರೆ ಇದು ಹಜ್ ಅಲ್ಲ, ಹಜ್ಜ್‌ನ ರೂಪವಾಗಿದೆ. ಈ ದಿನಗಳಲ್ಲಿ ಖಾದಿಯಾನ್ 'ಮಕ್ಕ' ಆಗುವುದಿಲ್ಲ. ಆದರೆ ಮಕ್ಕದ ಅನುಗ್ರಹಗಳು ಇಲ್ಲಿ ಅವತರಿಸುತ್ತವೆ. (ಖುತುಬಾತೆ ಮಹ್ಮೂದ್, ಸಂಪುಟ-13, ಖುತ್ಬ ಜುಮುಅ 11-12-1931)

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ತನ್ನ ಸಹವಾಸದಿಂದಲೂ ತನ್ನ ಸಂಪತ್ತಿನಿಂದಲೂ ನನ್ನೊಂದಿಗೆ ಒಳಿತಿನಿಂದ ವರ್ತಿಸಿದುದು ಎಲ್ಲರಿಗಿಂತ ಹೆಚ್ಚಾಗಿ ಅಬೂಬಕರ್ ಆಗಿದ್ದಾರೆ. ನಾನು ನನ್ನ ಸಮುದಾಯದವರ ಪೈಕಿ ಯಾರನ್ನಾದರೂ ನನ್ನ ಖಲೀಲ್ (ನೈಜ ಮಿತ್ರ)ನನ್ನಾಗಿ ಘೋಷಿಸುವವನಾಗಿದ್ದರೆ ನಾನು ಅಬೂಬಕರ್‌ರನ್ನು ನನ್ನ ಖಲೀಲ್ ಎಂದು ಮಾಡಿಕೊಳ್ಳುತ್ತಿದ್ದೆ. ಮಸೀದಿಯಲ್ಲಿ ಅಬೂಬಕರ್‌ರ ಕಡೆಗೆ ಇರುವ ಬಾಗಿಲು ಹೊರತು ಬಾಕಿಯೆಲ್ಲವೂ ಮುಚ್ಚಲ್ಪಡಬೇಕು.**

**ಹಝ್ರತ್ ಅಬೂಬಕರ್ ಸಿದ್ದೀಖ್(ರ) ರವರು ಅರಬಿಯರ ವಂಶಾವಳಿಗಳ ಬಗ್ಗೆ ಅವರು ಎಲ್ಲರಿಗಿಂತಲೂ ಹೆಚ್ಚು ಜ್ಞಾನ ಸಂಪನ್ನರಾಗಿದ್ದರು.**

**ಮಕ್ಕದ ನಿವಾಸಿಗಳ ಅಭಿಪ್ರಾಯ ಪ್ರಕಾರ ಹಝ್ರತ್ ಅಬೂಬಕರ್(ರ) ರವರು ಮಕ್ಕದ ಅತ್ಯುತ್ತಮ ನಿವಾಸಿಗಳಲ್ಲಿ ಒಬ್ಬರಾಗಿದ್ದರು. ಮಕ್ಕದ ನಿವಾಸಿಗಳಿಗೆ ಏನಾದರೂ ಕಷ್ಟ ಸಂಭವಿಸಿದರೆ ಅವರು ಹಝ್ರತ್ ಅಬೂಬಕರ್(ರ)ರವರಿಂದ ನೆರವನ್ನು ಅಪೇಕ್ಷಿಸುತ್ತಿದ್ದರು.**

**ಹಝ್ರತ್ ಅಬೂಬಕರ್(ರ)ರಿಗೆ ವಂಶಾವಳಿಯ ಜ್ಞಾನದ ಹಾಗೆಯೇ ಅರೇಬಿಯರ ಯುದ್ಧಗಳ ದಿನಾಂಕಗಳ ಬಗ್ಗೆಯೂ ಅರಿವು ಇತ್ತು. ಅದೇ ರೀತಿಯಲ್ಲಿ ಹಝ್ರತ್ ಅಬೂಬಕರ್(ರ) ಕವಿಯಾಗಿರಲಿಲ್ಲ. ಆದರೆ ಪದ್ಯಗಳ ಕುರಿತು ಆಸಕ್ತಿ ಇತ್ತು.**

**ಹಝ್ರತ್ ಅಬೂಬಕರ್(ರ)ರವರ ಶ್ರೇಷ್ಠತೆ ಅವರ ವೈಯ್ಯಕ್ತಿಕ ಬುದ್ಧಿಮತ್ತೆಯಾಗಿತ್ತು. ಅದರ ಉದಾಹರಣೆ ಆರಂಭದಲ್ಲೂ ಕಾಣಿಸಿತು, ಅಂತಿಮದಲ್ಲೂ ಕಾಣಿಸಿತು, ಅವರು ಬುದ್ಧಿಶಾಲಿತ್ವದ ಸಂಗ್ರಹವಾಗಿದ್ದರು ಅಂದರೆ ಅವರು ಮಜ್‌ಮೂಅತುಲ್ ಫಿರಾಸತೈನ್ ಆಗಿದ್ದರು. (ಹಝ್ರತ್ ಮಸೀಹ್ ಮೌಊದ್(ಅ))**

**ಅಲ್ಲಾಹನು ತನ್ನ ವಚನಗಳನ್ನು ಅವರಿಗೆ ಅನ್ವಯಿಸಿ ಅವತೀರ್ಣ ಗೊಳಿಸಿದನು. ಅವರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಂಗಡಿಗನನ್ನಾಗಿ ಆಯ್ಕೆ ಮಾಡಿದನು. ಅವರ ಸತ್ಯಸಂಧತೆ ಮತ್ತು ಸ್ಥಿರತೆಗೋಸ್ಕರ ಅವರನ್ನು ಪ್ರಶಂಸಿದನು.**

**ಹಝ್ರ್.ರತ್ ಅಬೂಬಕರ್(ರ) ತನ್ನ ಸಭ್ಯತೆ ಮತ್ತು ಯೋಗ್ಯತೆಯ ಕಾರಣದಿಂದ ಖುರೈಶಿನಲ್ಲಿ ಬಹಳ ಗೌರವಾನ್ವಿತ ಮತ್ತು ಆದರಣೀಯ ವ್ಯಕ್ತಿಯಾಗಿದ್ದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ್.ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಬೂಬಕರ್(ರ) ಉಪಸ್ಥಿತರಿರುವಾಗ ಬೇರೆ ಯಾರಾದರೂ ನಮಾಝ್‌ಗೆ ಇಮಾಮತ್ ವಹಿಸುವುದು ಸರಿಯಲ್ಲ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11–11–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹು ರವರ ಬಗ್ಗೆ ಪ್ರಸ್ತಾಪಿಸುತ್ತಾ ನಡೆಯುತ್ತಿದೆ. ಅವರ ಜೀವನ ಚರಿತ್ರೆಯ ಕೆಲವು ಭಾಗಗಳನ್ನು ವಿವರಿಸಲಾಗಿದೆ. ಅದರ ಬಗ್ಗೆ ಹೀಗೆ ಸಹ ವರದಿ ಮಾಡಲಾಗಿದೆ, ಅವರು ವಂಶಾವಳಿ ಬಗ್ಗೆ ಜ್ಞಾನ ಗಳಿಸಿದ್ದ ತಜ್ಞರಾಗಿದ್ದರು. ಅವರು ಪದ್ಯ ರಚನೆ ಮಾಡುವ ಅಭಿರುಚಿ ಸಹ ಹೊಂದಿದ್ದರು. ಅರಬಿಯರ ವಂಶಾವಳಿಗಳ ಬಗ್ಗೆ ಅವರು ಎಲ್ಲರಿಗಿಂತಲೂ ಹೆಚ್ಚು ಜ್ಞಾನ ಸಂಪನ್ನರಾಗಿದ್ದರು.

ಜುಬೈರ್ ಬಿನ್ ಮತ್‌ಅಮ್ ಈ ವಿದ್ಯೆಯಲ್ಲಿ ನುರಿತರಾಗಿದ್ದರು. ಅವರು ಅದನ್ನು ಹಝ್ರತ್ ಅಬೂಬಕರ್(ರ)ರಿಂದ ಕಲಿತಿದ್ದರು. ಏಕೆಂದರೆ ವಿಶಿಷ್ಟವಾಗಿ ಅವರು ಖುರೈಶಿ ಗೋತ್ರದವರ ಒಳಿತುಗಳ ಬಗ್ಗೆ ಮತ್ತು ಕೆಡುಕುಗಳ ಬಗ್ಗೆ ಎಲ್ಲರಿಗಿಂತಲೂ ಹೆಚ್ಚು ಜ್ಞಾನ ಗಳಿಸಿದವರಾಗಿದ್ದರು. ಆದರೆ ಹಝ್ರತ್ ಅಬೂಬಕರ್(ರ) ಖುರೈಶಿಗಳ ಕೆಡುಕುಗಳ ಬಗ್ಗೆ ಪ್ರಸ್ತಾಪಿಸುತ್ತಿರಲಿಲ್ಲ. ಇದೇ ಕಾರಣದಿಂದ ಅವರು ಹಝ್ರತ್ ಉಖೈಲ್ ಬಿನ್ ಅಬೂತಾಲಿಬ್(ರ)ರಿಗಿಂತ ಹೆಚ್ಚು ಜನಪ್ರಿಯರಾಗಿದ್ದರು. ಖುರೈಶಿ ಗೋತ್ರದವರ ವಂಶಾವಳಿ, ಅವರ ತಂದೆ ತಾತಂದಿರ ಬಗ್ಗೆ, ಅವರ ಒಳಿತುಗಳ ಮತ್ತು ಕೆಡುಕುಗಳ ಬಗ್ಗೆ ಹಝ್ರತ್ ಅಬೂಬಕರ್(ರ)ರವರ ನಂತರ ಇತರರಿಗಿಂತ ಹೆಚ್ಚು ಜ್ಞಾನ ಗಳಿಸಿದವರು ಹಝ್ರತ್ ಉಖೈಲ್(ರ) ಆಗಿದ್ದರು. ಆದರೆ ಖುರೈಶಿ ಗೋತ್ರದವರು ಅವರನ್ನು ಇಷ್ಟಪಡುತ್ತಿರಲಿಲ್ಲ. ಏಕೆಂದರೆ ಹಝ್ರತ್ ಉಖೈಲ್(ರ) ಖುರೈಶಿಗಳ ಕೆಡುಕುಗಳನ್ನು ಸಹ ವಿವರಿಸುತ್ತಿದ್ದರು. ಹಝ್ರ್.ರತ್ ಉಖೈಲ್ ಮಸ್ಜಿದ್ ನಬವಿಯಲ್ಲಿ ವಂಶಾವಳಿಯ ಹೆಸರುಗಳನ್ನು ಮತ್ತು ಅರೇಬಿಯರ ಘಟನೆಗಳು ಹಾಗು ಸ್ಥಿತಿಗತಿಗಳ ಅರಿವು ಗಳಿಸಲು ಹಝ್ರತ್ ಅಬೂಬಕರ್(ರ)ರ ಬಳಿ ಕುಳಿತುಕೊಳ್ಳುತ್ತಿದ್ದರು.

ಮಕ್ಕದ ನಿವಾಸಿಗಳ ಅಭಿಪ್ರಾಯ ಪ್ರಕಾರ ಹಝ್ರತ್ ಅಬೂಬಕರ್(ರ) ರವರು ಮಕ್ಕದ ಅತ್ಯುತ್ತಮ ನಿವಾಸಿಗಳಲ್ಲಿ ಒಬ್ಬರಾಗಿದ್ದರು. ಮಕ್ಕದ ನಿವಾಸಿಗಳಿಗೆ ಏನಾದರೂ ಕಷ್ಟ ಸಂಭವಿಸಿದರೆ ಅವರು ಹಝ್ರತ್ ಅಬೂಬಕರ್(ರ)ರವರಿಂದ ನೆರವನ್ನು ಅಪೇಕ್ಷಿಸುತ್ತಿದ್ದರು. (ಅಸ್ಸೀರತುಲ್ ಹಲಬೀಯ, ಸಂಪುಟ–1, ಪುಟ–390, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಅಬೂಬಕರ್(ರ)ರವರು ಅರಬ್ ವಂಶಾವಳಿಯ ಬಗ್ಗೆ, ವಿಶೇಳವಾಗಿ ಖುರೈಶ್ ವಂಶಾವಳಿಯ ಬಗ್ಗೆ ಹೆಚ್ಚಿನ ಜ್ಞಾನವನ್ನು ಹೊಂದಿದ್ದಾರೆಂದು ಹೇಳಲಾಗಿದೆ. ಆದ್ದರಿಂದ, ಖುರೈಶ್ ಕವಿಗಳು ರಸೂಲುಲ್ಲಾ (ಸಲ್ಲಲ್ಲಾಹು ಅಲೈಹಿವ ಸಲ್ಲಮ್) ಅವರ ನಿಂದನೆಯಲ್ಲಿ ಕವಿತೆಗಳನ್ನು ಓದಿದಾಗ, ಹಝ್ರತ್ ಹಸನ್ ಬಿನ್ ಸಾಬಿತ್(ರ) ಅವರಿಗೆ ಕಾವ್ಯದ ರೂಪದಲ್ಲಿಯೇ ಉತ್ತರಿಸುವ ಜವಾಬ್ದಾರಿಯನ್ನು ವಹಿಸಲಾಯಿತು. ಹಝ್ರತ್ ಹಸನ್(ರ.ಅ) ರಸೂಲುಲ್ಲಾಹ್(ಸ.ಅ) ಅವರ ಸೇವೆಗೆ ಬಂದಾಗ, ರಸೂಲುಲ್ಲಾಹ್(ಸ) ಅವರಿಗೆ ಹೇಳಿದರು, "ನಾನೇ ಖುರೈಷಿಯವನಾಗಿದ್ದಾಗ ನೀವು ಖುರೈಷಿಗಳ ಬಗ್ಗೆ ಹೇಗೆ ನಿಂದಿಸಬಹುದು?" ಈ ಕುರಿತು ಹಝ್ರತ್ ಹಸನ್ ಹೇಳಿದರು: ಯಾ ರಸೂಲಲ್ಲಾಹ್(ಸ)!! ಹಿಟ್ಟಿನಿಂದ ಕೂದಲು ಅಥವಾ ಬೆಣ್ಣೆಯಿಂದ ಕೂದಲನ್ನು ತೆಗೆಯುವಂತೆ ನಾನು ನಿಮ್ಮನ್ನು ಅವರಿಂದ ತೆಗೆದುಕೊಳ್ಳುತ್ತೇನೆ. ಇದಕ್ಕೆ ರಸೂಲುಲ್ಲಾಹ್(ಸ) ಅವರಿಗೆ ಹೇಳಿದರು: ನೀವು ಹಝ್ರತ್ ಅಬೂಬಕರ್(ರ) ಅವರ ಬಳಿಗೆ ಹೋಗಿ ಖುರೈಷಿಗಳ ವಂಶಾವಳಿಯ ಬಗ್ಗೆ ಕೇಳಬೇಕು. ಹಝ್ರತ್ ಹಸನ್(ರ)

ಹೇಳಿದರು, ನಾನು ಕವಿತೆಗಳನ್ನು ಬರೆಯುವ ಮೊದಲು, ಹಝ್ರತ್ ಅಬೂಬಕರ್(ರ) ಅವರ ಸೇವೆಗೆ ಹಾಜರಾಗುತ್ತಿದ್ದೆ ಮತ್ತು ಅವರು ಖುರೈಷಿಗಳ ಪುರುಳರು ಮತ್ತು ಮಹಿಳೆಯರ ಬಗ್ಗೆ ನನಗೆ ಮಾರ್ಗದರ್ಶನ ನೀಡುತ್ತಿದ್ದರು. ಹಾಗಾಗಿ ಹಝ್ರತ್ ಹಸನ್(ರ) ಅವರ ಕವಿತೆಗಳು ಮಕ್ಕಾಗೆ ತಲುಪಿದಾಗ, ಈ ಕವಿತೆಗಳ ಹಿಂದೆ ಅಬೂಬಕರ್ ಅವರ ಮಾರ್ಗದರ್ಶನ ಮತ್ತು ಸಲಹೆಗಳಿವೆ ಎಂದು ಮಕ್ಕಾದ ಜನರು ಹೇಳುತ್ತಿದ್ದರು.

(ಸೀರತ್ ಸಯ್ಯಿದುನಾ ಸಿದ್ದೀಕೆ ಅಕ್ಬರ್, ಉಸ್ತಾದ್ ಉಮರ್ ಅಬುನ್ನಸರ್, ಉರ್ದು ಅನುವಾದ, ಪುಟ–817–818)

ಹಝ್ರತ್ ಅಬೂಬಕರ್(ರ)ರಿಗೆ ವಂಶಾವಳಿಯ ಜ್ಞಾನದ ಹಾಗೆಯೇ ಅರೇಬಿಯರ ಯುದ್ಧಗಳ ದಿನಾಂಕಗಳ ಬಗ್ಗೆಯೂ ಅರಿವು ಇತ್ತು. ಅದೇ ರೀತಿಯಲ್ಲಿ ಹಝ್ರತ್ ಅಬೂಬಕರ್(ರ) ಕವಿಯಾಗಿರಲಿಲ್ಲ. ಆದರೆ ಪದ್ಯಗಳ ಕುರಿತು ಆಸಕ್ತಿ ಇತ್ತು.

ಹಝ್ರತ್ ಅಬೂಬಕರ್(ರ)ರವರ ಜೀವನ ಚರಿತ್ರೆಗಾರರು ಹೀಗೆ ಚರ್ಚಿಸಿದ್ದಾರೆ – ಹಝ್ರತ್ ಅಬೂಬಕರ್(ರ) ಸ್ವತಃ ಪದ್ಯ ರಚನೆ ಮಾಡಿದ್ದರೋ ಇಲ್ಲವೋ? ಎಂದು. ಹಝ್ರತ್ ಅಬೂಬಕರ್(ರ) ರಚಿಸಿದ ಇಪ್ಪತ್ತೈದು ಖಸೀದಗಳ ಒಂದು ಕರಡುಪ್ರತಿ ತುರ್ಕಿ ದೇಶದ ಒಂದು ಗ್ರಂಥಾಲಯದಲ್ಲಿ ಲಭಿಸಿದೆ. ಅವು ಹಝ್ರತ್ ಅಬೂಬಕರ್(ರ) ರಚಿಸಿದ ಪದ್ಯಗಳೆಂದು ಹೇಳಲಾಗುತ್ತಿದೆ. ಆ ಕರಡು ಪ್ರತಿಯಲ್ಲಿ ಒಬ್ಬ ಬರಹಗಾರ ಹೀಗೆ ಬರೆದಿದ್ದಾರೆ: ಈ ಪದ್ಯಗಳು ಹಝ್ರತ್ ಅಬೂಬಕರ್(ರ)ರವರದ್ದು ಎಂಬುದರ ಬಗ್ಗೆ ದೃಢೀಕರಣ ನನಗೆ ದೇವ ಸಂದೇಶವಾಣಿ (ಇಲ್‌ಹಾಮ್) ಮೂಲಕ ಆಗಿದೆ. ತಬಖಾತ್ ಇಬ್ನು ಸಅದ್ ಎಂಬ ಗ್ರಂಥದಲ್ಲಿ ಮತ್ತು ಸೀರತ್ ಇಬ್ನು ಹಿಶಾಮ್ ಎಂಬ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಅಬೂಬಕರ್ ಕೆಲವು ಪದ್ಯಗಳನ್ನು ರಚಿಸಿದ್ದರೆಂದು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದಾಗ ದಫನ್ ಮಾಡಿದ ನಂತರ ಹಝ್ರತ್ ಅಬೂಬಕರ್(ರ) ಕೆಲವು ಪದ್ಯ ಚರಣಗಳನ್ನು ಹಾಡಿದ್ದರು. ಅವುಗಳ ಭಾಷಾಂತರ ಹೀಗೆ: ಎಲೈ ಕಣ್ಣೇ, ಇಹ ಪರಲೋಕಗಳ ಯಜಮಾನರಾದ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನದ ಸಂತಾಪದಿಂದ ಅಳುವ ಅರ್ಹತೆ ಗಳಿಸಿದುದರ ಆಣೆ ಹಾಕಿ ಹೇಳುತ್ತೇನೆ, ನೀನು ಅಳುತ್ತಾ ಇರು. ನಿನ್ನ ಕಣ್ಣೀರು ಎಂದೂ ನಿಲ್ಲದಿರಲಿ. ಎಲೈ ಕಣ್ಣೇ, ಖುರೈಶಿ ಗೋತ್ರದ ಅತ್ಯುತ್ತಮ ಪುತ್ರನ ಬಗ್ಗೆ ಕಣ್ಣೀರು ಸುರಿಸು. ಅವರನ್ನು ಸಂಜೆ ಹೊತ್ತಲ್ಲಿ ಗೋರಿಯುಲ್ಲಿ ಮರೆಮಾಡಲಾಯಿತು. ದೊರೆಗಳ ದೊರೆಯಾದ, ಜನರ ಸಂರಕ್ಷಕನಾದ, ಆರಾಧನೆ ಮಾಡುವವರ ಪ್ರಭುವಾಗಿರುವವನ ದುರೂದ್ (ಆಶೀರ್ವಾದ) ತಮ್ಮ ಮೇಲೆ ಅವತೀರ್ಣವಾಗಲಿ. ಮಿತ್ರನನ್ನು ಕಳೆದುಕೊಂಡ ನಂತರ ಇನ್ನು ಮುಂದೆ ಜೀವಿತ ಹೇಗೆ ನಿರ್ವಹಿಸುವುದು. ಹತ್ತು ಲೋಕಗಳನ್ನು ಶೃಂಗರಿಸುವಂತಹ ಮಹಾನುಭಾವರ ಅಗಲಿಕೆಯ ನಂತರ ಎಂತಹ ಅಲಂಕಾರ ಸಾಧ್ಯ. ನಾವು ಜೀವಿತದಲ್ಲಿ ಜೊತೆಯಾಗಿದ್ದ ಹಾಗೆ ಮೃತ್ಯು ಸಹ ನಮ್ಮನ್ನು ಒಟ್ಟೊಟ್ಟಿಗೆ ಆವರಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು.

(ಸೀರತ್ ಸಯ್ಯಿದುನಾ ಸಿದ್ದೀಕೆ ಅಕ್ಬರ್, ಉಸ್ತಾದ್ ಉಮರ್ ಅಬುನ್ನಸರ್, ಉರ್ದು ಅನುವಾದ, ಪುಟ–818–822)

ಹಝ್ರತ್ ಅಬೂಬಕರ್(ರ) ಬಹಳ ಬುದ್ಧಿಶಾಲಿಯಾಗಿದ್ದರು. ಹಝ್ರತ್ ಅಬೂ ಸಈದ್ ಖುದ್‌ರೀ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಲ್ಲಾಹನು ಒಬ್ಬ ದಾಸನಿಗೆ ಎರಡರಲ್ಲಿ ಒಂದನ್ನು ಆಯ್ಕೆ ಮಾಡುವ ಅಧಿಕಾರ ನೀಡಿದನು. ಲೋಕವನ್ನು ಆಯ್ಕೆ ಮಾಡಲು ಅಥವಾ ಅಲ್ಲಾಹನ ಬಳಿ ಇರುವುದನ್ನು ಆಯ್ಕೆ ಮಾಡಲು. ಆಗ ಆ ದಾಸನು ಅಲ್ಲಾಹನ ಬಳಿ ಇರುವುದನ್ನು ಇಷ್ಟಪಟ್ಟನು. ಈ ಮಾತನ್ನು ಆಲಿಸಿದಾಗ ಹಝ್ರತ್ ಅಬೂಬಕರ್(ರ) ಅಳಲು ಪ್ರಾರಂಭಿಸಿದರು. ಆಗ ಹಝ್ರತ್ ಅಬೂ ಸಈದ್ ಖುದ್‌ರೀ(ರ) ಮನಸಿನಲ್ಲಿಯೇ ಹೇಳಿದರು: ಈ ಹಿರಿಯರು ಅಳುತ್ತಾ ಇರುವುದು ಏಕೆ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಬೂಬಕರ್(ರ) ಅಳಬೇಡಿರಿ.

ತನ್ನ ಸಹವಾಸದಿಂದಲೂ ತನ್ನ ಸಂಪತ್ತಿನಿಂದಲೂ ನನ್ನೊಂದಿಗೆ ಒಳಿತಿನಿಂದ ವರ್ತಿಸಿದುದು ಎಲ್ಲರಿಗಿಂತ ಹೆಚ್ಚಾಗಿ ಅಬೂಬಕರ್ ಆಗಿದ್ದಾರೆ. ನಾನು ನನ್ನ ಸಮುದಾಯದವರ ಪೈಕಿ ಯಾರನ್ನಾದರೂ ನನ್ನ ಖಲೀಲ್ (ನೈಜ ಮಿತ್ರ)ನನ್ನಾಗಿ ಘೋಷಿಸುವವನಾಗಿದ್ದರೆ ನಾನು ಅಬೂಬಕರ್‌ರನ್ನು ನನ್ನ ಖಲೀಲ್ ಎಂದು ಮಾಡಿಕೊಳ್ಳುತ್ತಿದ್ದೆ. ಮಸೀದಿಯಲ್ಲಿ ಅಬೂಬಕರ್‌ರ ಕಡೆಗೆ ಇರುವ ಬಾಗಿಲು ಹೊರತು ಬಾಕಿಯೆಲ್ಲವೂ ಮುಚ್ಚಲ್ಪಡಬೇಕು.

(ಸಹೀಹ್ ಬುಖಾರಿ, ಕಿತಾಬುಸ್ಸಲಾತ್, ವರದಿ ಸಂಖ್ಯೆ–466)

ಈ ಬಾಗಿಲಿನ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಮಾಡಿದ ನೀಡಿದ ವ್ಯಾಖ್ಯಾನವನ್ನು ಮುಂದೆ ವಿವರಿಸುತ್ತೇನೆ. ಹೇಗಿದ್ದರೂ ಈ ಘಟನೆ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಜೀವಿತದ ಕೊನೆಯ ದಿನಗಳಲ್ಲಿ ಒಮ್ಮೆ ಸಹಾಬರನ್ನು ಸಂಬೋಧಿಸಿ ಭಾಷಣ ಮಾಡುತ್ತಾ ಹೇಳಿದರು: ಹೇ ಜನರೇ, ಅಲ್ಲಾಹನು ತನ್ನ ಒಬ್ಬ ದಾಸನೊಂದಿಗೆ ಹೇಳಿದನು: ನಾನು ನಿನಗೆ ಪೂರ್ಣವಾದ ಅಧಿಕಾರ ನೀಡುತ್ತೇನೆ. ನೀನು ಇಚ್ಛಿಸುವುದಾದರೆ ಇಹಲೋಕದಲ್ಲಿ ಇರಬಹುದು ಅಥವಾ ನೀನು ಇಚ್ಛಿಸುವುದಾದರೆ ನನ್ನ ಬಳಿಗೆ ಬರಬಹುದು. ಆಗ ಆ ದಾಸ ದೇವನ ಸಾಮೀಪ್ಯವನ್ನು ಇಷ್ಟಪಟ್ಟನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಮಾತುಗಳನ್ನು ಆಲಿಸಿ ಹಝ್ರತ್ ಅಬೂಬಕರ್(ರ) ರೋಧಿಸಿದರು. ಅವರ ಬಿಕ್ಕಳಿಕೆ ಹೆಚ್ಚು ಹೆಚ್ಚಾಗಿತ್ತು. ಕೊನೆಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನನಗೆ ಅಬೂಬಕರ್(ರ) ಮೇಲೆ ಎಷ್ಟು ಪ್ರೀತಿ ಇದೆ ಎಂದರೆ ಅಲ್ಲಾಹನ ಹೊರತು ಬೇರೆ ಯಾರನ್ನಾದರೂ ಖಲೀಲ್ (ನೈಜ ಮಿತ್ರ)ನನ್ನಾಗಿ ಮಾಡಿಕೊಳ್ಳುವುದು ಧರ್ಮಬದ್ಧವಾಗಿರುತ್ತಿದ್ದರೆ ನಾನು ಅಬೂಬಕರ್‌ರನ್ನು ನನ್ನ ಖಲೀಲ್ ಆಗಿ ಮಾಡಿಕೊಳ್ಳುತ್ತಿದ್ದೆ. ಹಝ್ರತ್ ಉಮರ್(ರ) ಹೇಳುತ್ತಾರೆ: ರಸೂಲುಲ್ಲಾಹ್(ಸ)ರವರು ಕೆಲವು ದಿವಸಗಳ ನಂತರ ನಿಧನ ಹೊಂದಿದಾಗ ಹಝ್ರತ್ ಅಬೂಬಕರ್(ರ)ರವರ ಅಳುವು ನಿಜವಾಗಿತ್ತು ಮತ್ತು ನಮ್ಮ ಬೇಸರ ವ್ಯಕ್ತಪಡಿಸುವಿಕೆಯು ದಡ್ಡತನವಾಗಿತ್ತು ಎಂದು ನಮಗೆ ಅರಿವಾಯಿತು. (ಉಸ್ವಾ ಎ ಹಸನ, ಅನ್ವಾರುಲ್ ಉಲೂಮ್, ಸಂಪುಟ–17, ಪುಟ–102)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತನಗೆ ಅವತೀರ್ಣವಾದ ವಚನ, **ಅಲ್ ಯೌಮ ಅಕ್‌ಮಲ್‌ತು ಲಕುಮ್ ದೀನಕುಮ್ ವ ಅತ್‌ಮಮ್‌ತು ಅಲೈಕುಮ್ ನಿಅ್‌ಮತೀ** ಎಂಬ ವಚನವನ್ನು ಪಠಿಸಿದಾಗ ಹಝ್ರತ್ ಅಬೂಬಕರ್(ರ) ರೋಧಿಸುತ್ತಾ ಹೇಳಿದರು: ನನಗೆ ಈ ವಚನದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೃತ್ಯುವಿನ ವಾಸನೆ ಬರುತ್ತಾ ಇದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನ ಪ್ರವಾದಿಗಳು ಸರಕಾರದ ಅಧಿಕಾರಿಗಳ ಹಾಗೆ ಆಗಿರುತ್ತಾರೆ. ಬಂದೋಬಸ್ತ್ ಮಾಡುವ ಅಧಿಕಾರಿಗಳು ತಮ್ಮ ಕೆಲಸ ಮುಗಿಸಿದ ನಂತರ ಸ್ಥಳದಿಂದ ಹೋಗುವ ಹಾಗೆ ಪ್ರವಾದಿಗಳು ಯಾವ ಕೆಲಸ ನಿರ್ವಹಿಸಲು ಲೋಕಕ್ಕೆ ಆಗಮಿಸುತ್ತಾರೋ ಆ ಕೆಲಸ ಮಾಡಿದ ನಂತರ ಈ ಲೋಕದಿಂದ ಹೊರಟು ಹೋಗುತ್ತಾರೆ. **ಅಲ್‌ಯೌಮ ಅಕ್‌ಮಲ್‌ತು ಲಕುಮ್ ದೀನಕುಮ್** ಎಂಬ ಪವಿತ್ರ ಖುರ್‌ಆನ್ ವಚನವನ್ನು ಆಲಿಸಿದಾಗ ಹಝ್ರತ್ ಅಬೂಬಕರ್(ರ) ಅದು ಕೊನೆಯ ಧ್ವನಿ ಎಂದು ಮನವರಿಕೆ ಮಾಡಿಕೊಂಡರು. ಇದರಿಂದ ಹಝ್ರತ್ ಅಬೂಬಕರ್(ರ)ರವರ ಬುದ್ಧಿಶಕ್ತಿ ಬಹಳ ತೀಕ್ಷ್ಣವಾಗಿತ್ತೆಂದು ತಿಳಿದುಬರುತ್ತದೆ.

ಈ ಕಿಟಕಿಗಳ ಬಗ್ಗೆ ಹೇಳಿದ್ದನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮಸೀದಿ ಎಂಬುದು ಅಲ್ಲಾಹನ ರಹಸ್ಯಗಳನ್ನು ಪ್ರಕಟಗೊಳಿಸುವ ಸ್ಥಳವೆಂಬುವುದಕ್ಕೆ ಸಂಕೇತವಾಗಿದೆ. ಎಂದರೆ, ಅಲ್ಲಾಹನ ರಹಸ್ಯವಾದ ಜ್ಞಾನಗಳು ಸದಾ ಹಝ್ರತ್ ಅಬೂಬಕರ್(ರ)ರಿಗೆ ಲಭಿಸುತ್ತಾ ಇರುವುದು ಎಂದಾಗಿದೆ ಇದರ ಅರ್ಥ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರವಾದಿಗಳು ಆಲಂಕಾರಿಕ ಭಾಷೆಯಲ್ಲಿ ಮಾತನಾಡುತ್ತಾರೆ. ಉದಾಹರಣೆಗೆ, ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಅವರು ತಮ್ಮ ಪುತ್ರನಿಗೆ ಹೊಸ್ತಿಲನ್ನು ಬದಲಾಯಿಸಲು ಹೇಳುವುದು ಅಥವಾ ಪ್ರವಾದಿ (ಸ) ಅವರ ಚಿನ್ನದ ಕಡಗಗಳನ್ನು ನೋಡುವುದು ಅವರ ಸ್ಪಷ್ಟ ಅರ್ಥವನ್ನು ಆಧರಿಸಿಲ್ಲ, ಆದರೆ ರೂಪಕವಾಗಿದೆ. ಅವರಲ್ಲಿ ಇನ್ನೊಂದು ಸತ್ಯಾಂಶವೂ ಇತ್ತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ವಾದದ ಉದ್ದೇಶವು ಹಝ್ರತ್ ಅಬೂಬಕರ್(ರ)ರಿಗೆ ಪವಿತ್ರ ಖುರ್‌ಆನಿನ ಜ್ಞಾನ ಎಲ್ಲರಿಗಿಂತ ಹೆಚ್ಚಿಗೆ ಇತ್ತು. ಆದ್ದರಿಂದ ಹಝ್ರತ್ ಅಬುಬಕರ್(ರ) ಅವರು ಈ ವಾದವನ್ನು ಮಾಡಿದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನ್ನ ಧರ್ಮವೆಂದರೆ ಈ ಅರ್ಥಗಳು ಸ್ಪಷ್ಟವಾಗಿ ವಿರೋಧಾತ್ಮಕವಾಗಿದ್ದರೂ ಸಹ, ಧರ್ಮನಿಷ್ಠೆ ಮತ್ತು ಪ್ರಾಮಾಣಿಕತೆಯ ಅವಶ್ಯಕತೆಯೆಂದರೆ ಅಬೂಬಕರ್(ರ) ಅವರ ಮಾತುಗಳನ್ನೇ ನಂಬಬೇಕು ಅಂದರೆ ಜನರು ಅವರನ್ನು ನಂಬಿದ್ದರು, ಆದರೆ ಇಲ್ಲಿ ಪವಿತ್ರ ಖುರ್‌ಆನ್‌ನ ಒಂದೇ ಒಂದು ಪದವಿಲ್ಲ ಇದು ಹಝ್ರತ್ ಅಬುಬಕರ್(ರ) ಅವರ ಅರ್ಥಕ್ಕೆ ವಿರುದ್ಧವಾಗಿದೆ ಎಂದು ಹೇಳುವುದಕ್ಕೆ. ಹಝ್ರತ್ ಮಸೀಹ್

ಮೌಊದ್ ಅಲೈಹಿಸ್ಸಲಾಮ್ ಅವರು ಹೇಳುತ್ತಾರೆ ಮೌಲವಿಗಳೊಂದಿಗೆ ವಿಚಾರಿಸಿರಿ. ಹಝ್ರತ್ ಅಬೂಬಕರ್(ರ) ಬುದ್ಧಿಶಾಲಿಯಾಗಿರಲಿಲ್ಲವೇ? ಅವರು ಸಿದ್ದೀಖ್ ಎಂದು ಕರೆಯಲ್ಪಡಲಿಲ್ಲವೇ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದ ನಂತರ ಅವರನ್ನು ಪ್ರಥಮ ಖಲೀಫರನ್ನಾಗಿ ಆಯ್ಕೆ ಮಾಡಿರಲಿಲ್ಲವೇ? ಅವರು ಇಸ್ಲಾಮಿಗೆ ಬಹಳ ದೊಡ್ಡ ಸೇವೆ ಸಲ್ಲಿಸಿದರು. ಅವರು ಭಯಾನಕ ಧರ್ಮತ್ಯಾಗದ ಹಾವಳಿಯನ್ನು ತಡೆಗಟ್ಟಿದರು. ನೀವು ದೇವಭಕ್ತಿಯೊಂದಿಗೆ ಹೇಳಿರಿ. ಹಝ್ರತ್ ಅಬೂಬಕರ್(ರ)ರವರು **ವಮಾ ಮುಹಮ್ಮದುನ್ ಇಲ್ಲಾ ರಸೂಲುನ್ ಖದ್ ಖಲತ್ ಮಿನ್ ಖಬ್ಲಿಹಿ ರ್‍ರುಸುಲ್** ಎಂಬ ಪವಿತ್ರ ಖುರ್‌ಆನ್ ವಚನವನ್ನು ಪಠಿಸಿದುದು ಪರಿಪೂರ್ಣವಾದ ಸಾಕ್ಷ್ಯಾಧಾರ ನೀಡಲಿಕ್ಕೋಸ್ಕರವಲ್ಲವೇ? ಅವರ ಉದ್ದೇಶ ಬಾಲಿಶವಾಗಿತ್ತೇ? ಅಥವಾ ಒಬ್ಬ ಮಗು ಸಹ **"ಈಸಾರನ್ನು ಮೃತನೆಂದು ಭಾವಿಸುವವನು ಕಾಫಿರ್"** ಎಂದು ಹೇಳುವ ರೀತಿಯಲ್ಲಿತ್ತೇ ಆ ಸಾಕ್ಷ್ಯಾಧಾರ? ಹಝ್ರತ್ ಅಬೂಬಕರ್(ರ) ಪವಿತ್ರ ಖುರ್‌ಆನಿನ ಆ ವಚನ ಪಠಿಸಿದುದು ದೃಢವಾದ ಸಾಕ್ಷ್ಯಾಧಾರ ನೀಡಲಿಕ್ಕೋಸ್ಕರವಾಗಿತ್ತು. ಅದು ನ್ಯೂನತೆಯಿಂದ ಕೂಡಿದ ಸಾಕ್ಷ್ಯಾಧಾರವಾಗಿರಲಿಲ್ಲ.

(ಮಲ್‌ಫೂಝಾತ್, ಸಂಪುಟ-1, ಪುಟ-441-442, 1984)

ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: **ಅಲ್‌ಯೌಮ ಅಕ್‌ಮಲ್‌ತುಲಕುಮ್ ದೀನಕುಮ್** ಎಂಬ ಪವಿತ್ರ ಖುರ್‌ಆನ್ ವಚನ ಎರಡು ಪಾರ್ಶ್ವಗಳನ್ನು ಹೊಂದಿದೆ. ಒಂದನೇ ಪಾರ್ಶ್ವ ನಿಮ್ಮನ್ನು ಪರಿಶುದ್ಧಿ ಮಾಡಲಾಗಿದೆ. ಎರಡನೆಯ ಪಾರ್ಶ್ವ ಗ್ರಂಥ ಪರಿಪೂರ್ಣವಾಗಿದೆ ಎಂದು. ಒಂದು ಕೆಲಸ ಮಾಡಿ ಮುಗಿಸಿದಾಗ ಆ ಕೆಲಸ ಪೂರ್ಣವಾಗುವುದು ಅಗಲಿಕೆಯನ್ನು ಸೂಚಿಸುತ್ತದೆ. ಭದ್ರತಾ ಸಿಬ್ಬಂದಿಗಳು ಬಂದೋಬಸ್ತ್ ಕ್ರಮ ಮುಗಿದ ನಂತರ ಅಲ್ಲಿಂದ ಹೊರಟು ಹೋಗುತ್ತಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂಬಕರ್(ರ)ರಿಗೆ ಸಂಬಂಧಿಸಿದ ವಿಷಯ ಆಲಿಸಿದಾಗ ಹೇಳಿದರು ಅಬೂಬಕರ್(ರ) ಎಲ್ಲರಿಗಿಂತಲೂ ಬುದ್ಧಿಶಾಲಿ ಎಂದು. ಹೀಗೆ ಸಹ ಹೇಳಿದರು: ಲೋಕದಲ್ಲಿ ಯಾರನ್ನಾದರೂ ಮಿತ್ರನನ್ನಾಗಿ ಮಾಡಿಕೊಳ್ಳುವುದಾದರೆ ನಾನು ಅಬೂಬಕರ್(ರ)ರನ್ನು ಮಿತ್ರನನ್ನಾಗಿ ಮಾಡಿಕೊಳ್ಳುವೆನು. ಹೀಗೆ ಸಹ ಹೇಳಿದರು: ಅಬೂಬಕರ್(ರ)ರವರ ಮನೆಯ ಕಡೆಗೆ ಇರುವ ಕಿಟಕಿಯನ್ನು ಹೊರತು ಮಸೀದಿಯ ಇತರ ಎಲ್ಲ ಕಿಟಕಿಗಳನ್ನೂ ಮುಚ್ಚಿಬಿಡಿರಿ. ಇದರಲ್ಲಿ ಅಡಕವಾದ ರಹಸ್ಯವೇನು? ಇದರ ಅರ್ಥವೇನು? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮಸ್‌ಜಿದ್ ಅಲ್ಲಾಹನ ಭವನವಾಗಿದೆ. ಎಲ್ಲ ಜ್ಞಾನಗಳ ಉದ್ಭವಸ್ಥಾನ ಅದಾಗಿದೆ. ಆದುದರಿಂದ ಅಬೂಬಕರ್(ರ)ರವರ ಆಂತರಿಕ ಕಿಟಕಿ ಮಸ್‌ಜಿದ್ ಕಡೆಗೆ ತೆರೆದಿದ್ದರೆ ಅವರಿಗೋಸ್ಕರ ಮಸ್‌ಜಿದ್‌ನ ಕಿಟಕಿ ಸಹ ತೆರೆದಿರಿಸಲ್ಪಡಲಿ. ಬೇರೆ ಸಹಾಬರು ಇದರಿಂದ ವಂಚಿತರಾಗಿದ್ದರೆಂದು ಇದರ ಅರ್ಥವಲ್ಲ. ಅವರು ಸಹ ಬುದ್ಧಿಶಾಲಿಗಳಾಗಿದ್ದರು. ಆದರೆ ಹಝ್ರತ್ ಅಬೂಬಕರ್(ರ) ಇತರ ಎಲ್ಲರಿಗಿಂತ ಬುದ್ಧಿಶಾಲಿಯಾಗಿದ್ದರು. ಹಝ್ರತ್ ಅಬೂಬಕರ್(ರ)ರವರ ಶ್ರೇಷ್ಠತೆ ಅವರ ವೈಯ್ಯಕ್ತಿಕ ಬುದ್ಧಿಮತ್ತೆಯಾಗಿತ್ತು. ಅದರ ಉದಾಹರಣೆ ಆರಂಭದಲ್ಲೂ ಕಾಣಿಸಿತು. ಅಂತಿಮದಲ್ಲೂ ಕಾಣಿಸಿತು. ಅವರು ಬುದ್ಧಿಶಾಲಿತ್ವದ ಸಂಗ್ರಹವಾಗಿದ್ದರು.

(ಮಲ್‌ಫೂಝಾತ್, ಸಂಪುಟ-8, ಪುಟ-399-400, 1984 ಆವೃತಿ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹಝ್ರತ್ ಅಬೂಬಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹು ಅನುಭವಶಾಲಿಯೂ ಬುದ್ಧಿಶಾಲಿಯೂ ಆಗಿದ್ದರು. ಅವರು ಅನೇಕ ಸಂಧಿಗ್ದ ಸಮಸ್ಯೆಗಳನ್ನು ಮತ್ತು ಅವುಗಳ ಕಾಠಿಣ್ಯಗಳನ್ನು ನೋಡಿದರು. ಅನೇಕ ಯುದ್ಧಗಳಲ್ಲಿ ಭಾಗವಹಿಸಿದರು. ಯುದ್ಧ ತಂತ್ರಗಳನ್ನು ವೀಕ್ಷಿಸಿದರು. ಅವರು ಅನೇಕ ಮರುಭೂಮಿಗಳನ್ನೂ ಪರ್ವತ ಪ್ರದೇಶಗಳನ್ನೂ ತುಳಿದು ಹಾಕಿದರು. ಅನೇಕ ವಿನಾಶಕರ ಪ್ರದೇಶಗಳಲ್ಲಿ ಧೈರ್ಯದಿಂದ ನುಗ್ಗಿದರು. ಅನೇಕ ವಕ್ರ ಮಾರ್ಗಗಳನ್ನು ಅವರು ನೇರಗೊಳಿಸಿದರು. ಅನೇಕ ಯುದ್ಧಗಳಲ್ಲಿ ಜಯಶಾಲಿಯಾದರು. ಅವರು ಅನೇಕ ವಿದ್ರೋಹಗಳನ್ನು ನಾಶಮಾಡಿದರು. ಅವರು ಅನೇಕ ಮಜಲುಗಳನ್ನು ದಾಟಿ ಹೋದರು. ಹಾಗೆ ಅವರು ಅನುಭವಶಾಲಿಯೂ ಬುದ್ಧಿಶಾಲಿಯೂ ಆದರು. ಅವರು ವಿಪತ್ತುಗಳ ಕಾಲದಲ್ಲಿ ಸಹನೆದೋರಿದರು. ಅವರು ಕಷ್ಟಪಟ್ಟು ಪ್ರಯತ್ನಿಸುವವರಾಗಿದ್ದರು. ಅಲ್ಲಾಹನು ತನ್ನ ವಚನಗಳನ್ನು ಅವರಿಗೆ ಅನ್ವಯಿಸಿ ಅವತೀರ್ಣ ಗೊಳಿಸಿದನು. ಅವರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಂಗಡಿಗನನ್ನಾಗಿ ಆಯ್ಕೆ ಮಾಡಿದನು. ಅವರ ಸತ್ಯಸಂಧತೆ ಮತ್ತು ಸ್ಥಿರತೆಗೋಸ್ಕರ ಅವರನ್ನು ಪ್ರಶಂಸಿದನು.

ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರೀತಿಗೆ ಪಾತ್ರರಾದವರಲ್ಲಿ ಎಲ್ಲರಿಗಿಂತ ಮೇಲಿನ ಸ್ಥಾನದಲ್ಲಿದ್ದರು ಎಂಬುದನ್ನು ಇದು ಸೂಚಿಸುತ್ತದೆ. ಅವರು ಸ್ವಾತಂತ್ರ್ಯದ ಸತ್ವದಿಂದ ಸೃಷ್ಟಿಸಲ್ಪಟ್ಟವರು. ನಿಷ್ಠತೆ ಅವರಲ್ಲಿ ಅಡಕವಾಗಿತ್ತು. ಆದುದರಿಂದ ಮಹತ್ವಪೂರ್ಣವಾದ ಸಂದರ್ಭದಲ್ಲಿ ಮತ್ತು ಭಯ ಹುಟ್ಟುವ ಕಾಲದಲ್ಲಿ ಅವರನ್ನು ಆಯ್ಕೆ ಮಾಡಲಾಯಿತು. ಅಲ್ಲಾಹನು ಸರ್ವಜ್ಞನೂ ಜಾಣ್ಮೆಯುಳ್ಳವನೂ ಆಗಿದ್ದಾನೆ. ಅಲ್ಲಾಹನು ಎಲ್ಲ ವಿಷಯಗಳನ್ನು ಅದರ ಸಂದರ್ಭ ಮತ್ತು ಸ್ಥಾನದಲ್ಲಿ ಇರಿಸುತ್ತಾನೆ. ಅಲ್ಲಾಹನು ಇಬ್ನು ಅಬೀ ಖುಹಾಫ ಮೇಲೆ ವಿಶಿಷ್ಟ ಅನುಗ್ರಹ ನೀಡಿದನು. ಅವರಿಗೆ ಏಕಮಾತ್ರ ವ್ಯಕ್ತಿತ್ವ ದಯಪಾಲಿಸಿದನು. ಅವರು ಮಾತನಾಡುವವರಲ್ಲಿ ಅತ್ಯಂತ ಸತ್ಯವಂತರಾಗಿದ್ದರು. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ: **ಇಲ್ಲ ತನ್ಸುರೂಹು ಫಖದ್ ನಸರಹುಲ್ಲಾಹು ಇಝ್ ಅಕ್ರಜಹುಲ್ಲಝೀನ ಕಫರೂ ಸಾನಿಯಸ್ನೈನಿ ಇಝ್ ಹುಮಾ ಫಿಲ್‌ಗಾರಿ ಇಝ್ ಯಖೂಲು ಲಿಸಹಾಬಿಹೀ ಲಾ ತಹ್‌ಝುನ್ ಇನ್ನಲ್ಲಾಹ ಮಾಅನಾ ಫಅನ್‌ಝಲಲ್ಲಾಹು ಸಕೀನತಹೂ ಅಲೈಹಿ ವ ಅಯ್ಯದಹೂ ಬಿಜುನೂದಿಲ್ಲಮ್ ತರೌಹಾ ವ ಜಅಲ ಕಲಿಮತಲ್ಲಝೀನ ಕಫರುಸ್ಸುಫುಲಾ ವ ಕಲಿಮತುಲ್ಲಾಹಿ ಹಿಯಲ್ ಉಲ್ಯಾ ವಲ್ಲಾಹು ಅಝೀಝುನ್ ಹಕೀಮ್** (ಸೂರತುತ್ತೌಬ:40)

ಅರ್ಥ: ನೀವು ಅವರಿಗೆ ಪ್ರವಾದಿಗೆ ನೆರವು ನೀಡದಿದ್ದರೆ ತಿಳಿದುಕೊಳ್ಳಿರಿ, ಅವಿಶ್ವಾಸಿಗಳು ಅವರನ್ನು (ತನ್ನ ಊರಿನಿಂದ) ಬಹಿಷ್ಕರಿಸಿದಾಗ ದಿಟವಾಗಿಯೂ ಅಲ್ಲಾಹನು ಅವರಿಗೆ ನೆರವಿತ್ತಿದ್ದನು – ಅವರು ಇಬ್ಬರಲ್ಲಿ ಒಬ್ಬರಾಗಿದ್ದರು – ಅವರೀರ್ವರೂ ಆ ಗುಹೆಯಲ್ಲಿದ್ದಾಗ; 'ನೀನು ವ್ಯಥೆ ಪಡಬೇಡ, ಖಂಡಿತವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ' ಎಂದು ಅವರು ತನ್ನ ಸಂಗಡಿಗನೊಡನೆ ಹೇಳಿದ್ದಾಗ. ಆ ಸಂದರ್ಭದಲ್ಲಿ ಅಲ್ಲಾಹನು ತನ್ನ ಕಡೆಯಿಂದಿರುವ ಸಾಂತ್ವನವನ್ನು ಅವರಿಗೆ ಇಳಿಸಿಕೊಟ್ಟನು. ನಿಮಗೆ ಅಗೋಚರವಾದ ಸೈನ್ಯಗಳಿಂದ ಅವನು ಅವರಿಗೆ ಬೆಂಬಲವಿತ್ತನು ಹಾಗೂ ಅವಿಶ್ವಾಸಿಗಳ ಮಾತನ್ನು ನಿಷ್ಫಲಗೊಳಿಸಿದನು. ಅಲ್ಲಾಹನ ವಚನ ಮಾತ್ರವೇ ಸರ್ವೋನ್ನತವಾದುದು. ಅಲ್ಲಾಹನು ಪ್ರತಾಪವಂತನೂ ವಿವೇಕಶಾಲಿಯೂ ಆಗಿದ್ದಾನೆ. (ಸಿರ್‍ರುಲ್ ಖಿಲಾಫ ಅನುವಾದ, ಪುಟ-60-61, ರೂಹಾನಿ ಖಝಾಇನ್, ಸಂಪುಟ-8, ಪುಟ-339)

ಹಝ್ರತ್ ಅಬೂಬಕರ್(ರ) ಸ್ವಪ್ನಗಳ ವ್ಯಾಖ್ಯಾನ ಮಾಡುವ ನೈಪುಣ್ಯ ಸಹ ಗಳಿಸಿದ್ದರು.

ಅವರ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಅಬೂಬಕರ್ ಸ್ವಪ್ನಗಳನ್ನು ವ್ಯಾಖ್ಯಾನ ಮಾಡುವ ನೈಪುಣ್ಯತೆ ಗಳಿಸಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಅವರು ಸ್ವಪ್ನಗಳ ವ್ಯಾಖ್ಯಾನ ಮಾಡುತ್ತಿದ್ದರು. ಇಮಾಮ್ ಮುಹಮ್ಮದ್ ಬಿನ್ ಸೀರೀನ್ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಹಝ್ರತ್ ಅಬೂಬಕರ್(ರ) ಎಲ್ಲರಿಗಿಂತ ದೊಡ್ಡ ಸ್ವಪ್ನ ವ್ಯಾಖ್ಯಾನಗಾರನಾಗಿದ್ದರು. (ಹಝ್ರತ್ ಅಬೂಬಕರ್ ಸೂದ್ದೀಖ್(ರ), ಮುಹಮ್ಮದ್ ಇಲ್ಯಾಸ್ ಆದಿಲ್, ಪುಟ-174)

ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ: ಉಹದಿನ ಮರಳಿ ಹೋಗುವಾಗ ಒಬ್ಬ ವ್ಯಕ್ತಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ತನ್ನ ಕನಸನ್ನು ಹೀಗೆ ವಿವರಿಸಿದರು: ಯಾ ರಸೂಲಲ್ಲಾಹ್, ನಾನು ಕನಸಿನಲ್ಲಿ ಒಂದು ಮೋಡವನ್ನು ಕಂಡೆನು. ಅದರಿಂದ ತುಪ್ಪ ಮತ್ತು ಜೇನು ಹನಿಹನಿಯಾಗಿ ಬೀಳುತ್ತಿತ್ತು. ಜನರು ಅದನ್ನು ತಮ್ಮ ಕೈಗಳಿಂದ ಅದನ್ನು ತೆಗೆಯುತ್ತಿದ್ದರು. ನಾನೊಂದು ಹಗ್ಗವನ್ನು ಕಂಡೆನು. ಅದು ಆಕಾಶದ ವರೆಗೂ ತಲುಪುತ್ತಿತ್ತು. ಅದನ್ನು ನೀವು ಹಿಡಿದಿದ್ದೀರಿ. ಅದರ ಮೂಲಕ ನೀವು ಮೇಲಕ್ಕೆ ಹೋಗುತ್ತೀರಿ. ಅದರ ನಂತರ ಬೇರೊಬ್ಬ ವ್ಯಕ್ತಿ ಅದನ್ನು ಹಿಡಿದುಕೊಂಡು ಮೇಲಕ್ಕೆ ಹೋಗುತ್ತಾರೆ. ಅದರ ನಂತರ ಬೇರೊಬ್ಬ ವ್ಯಕ್ತಿ ಅದನ್ನು ಹಿಡಿದುಕೊಂಡು ಮೇಲಕ್ಕೆ ಹೋಗುತ್ತಾರೆ. ಅದರ ನಂತರ ಬೇರೊಬ್ಬ ವ್ಯಕ್ತಿ ಅದನ್ನು ಹಿಡಿಯುತ್ತಾರೆ. ಆಗ ಅದು ಮುರಿದುಹೋಗುತ್ತದೆ. ಅದನ್ನು ಕಟ್ಟಲಾಗುತ್ತದೆ. ಅದರ ಮೂಲಕ ಅವರು ಕೂಡ ಮೇಲಕ್ಕೆ ಹೋಗುತ್ತಾರೆ. ಇದರ ವ್ಯಾಖ್ಯಾನವನ್ನು ಮಾಡಲು ನನಗೆ ಅನುಮತಿ ಕೊಡಿರಿ ಎಂದು ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಕೇಳಿದರು. ವ್ಯಾಖ್ಯಾನವನ್ನು ಮಾಡಲು ಅವರಿಗೆ ಅನುಮತಿ ಕೊಡಲಾಯಿತು. ಹಝ್ರತ್ ಅಬೂಬಕರ್(ರ) ಹೇಳಿದರು: ನೆರಳು ನೀಡುವ ಮೋಡದ ಅರ್ಥ ಇಸ್ಲಾಂ ಆಗಿದೆ. ತುಪ್ಪ ಮತ್ತು ಜೇನಿನ ಅರ್ಥ ಪವಿತ್ರ ಖುರ್‌ಆನ್ ಆಗಿದೆ. ಅದರ ಸಿಹಿಯನ್ನು ಪಡೆಯುವ ಜನರು ಎಂದರೆ, ಪವಿತ್ರ ಖುರ್‌ಆನಿನ ಜ್ಞಾನವನ್ನು ಗಳಿಸುವವರು. ಆಕಾಶದ ತನಕ ತಲುಪಿದ ಹಗ್ಗದ ಅರ್ಥ ಸತ್ಯ ಸಂಗತಿಯಾಗಿದೆ. ಅದನ್ನು ಹಝ್ರತ್ ಪೈಗಂಬರ್(ಸ) ಪಡೆದುಕೊಂಡು ಮೇಲಕ್ಕೆ ಹೋಗುತ್ತಾರೆ. ಅವರ ನಂತರ ಬೇರೊಬ್ಬ ವ್ಯಕ್ತಿ ಅದನ್ನು ಹಿಡಿದುಕೊಂಡು ಮೇಲಕ್ಕೆ ಹೋಗುತ್ತಾರೆ. ಅನಂತರ

ಬೇರೊಬ್ಬ ವ್ಯಕ್ತಿ ಅದನ್ನು ಹಿಡಿದುಕೊಂಡು ಮೇಲಕ್ಕೆ ಹೋಗುತ್ತಾರೆ. ಅನಂತರ ಮೇಲಕ್ಕೆ ಹೋಗುತ್ತಾರೆ. ಆಗ ಅದು ಮುರಿದು ಹೋಗುತ್ತದೆ. ಅವರಿಗಾಗಿ ಅದನ್ನು ಜೋಡಿಸಲಾಗುವುದು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ಸ್ವಲ್ಪ ಸರಿಯಾಗಿ ಹೇಳಿದ್ದೀರಿ ಮತ್ತು ಸ್ವಲ್ಪ ತಪ್ಪಾಗಿ ಹೇಳಿದ್ದೀರಿ. ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನಾಣೆ, ಸರಿ ಏನು ಮತ್ತು ತಪ್ಪೇನು ಎಂದು ನನಗೆ ತಿಳಿಸಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ಅಬೂಬಕರ್, ಆಣೆ ಹಾಕಬೇಡ. (ಸುನನ್ ಇಬ್ನೆ ಮಾಜ, ಕಿತಾಬ್ ತಅ್‌ಬೀರುರ್ ರುಯಾ, ಹದೀಸ್–3918)

ಅಂದರೆ ಸರಿಯಾದ ವ್ಯಾಖ್ಯಾನವನ್ನು ಆಗ ಸ್ಪಷ್ಟವಾಗಿ ತಿಳಿಸಲು ಹಝ್ರತ್ ಪೈಗಂಬರ್(ಸ) ಬಯಸುತ್ತಿರಲಿಲ್ಲ. ಆದ್ದರಿಂದ ಅವರು ಹೇಳಿದರು: ಆಣೆ ಹಾಕಬೇಡ, ನೀವು ಹೇಳಿದಷ್ಟು ಸಾಕು.

ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ಪತ್ನಿಯಾದ ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ನಾನು ಕನಸಿನಲ್ಲಿ ತನ್ನ ಕೊಠಡಿಯಲ್ಲಿ ಮೂರು ಚಂದ್ರಗಳು ಬೀಳುವುದಾಗಿ ಕಂಡೆನು. ಆ ಕನಸನ್ನು ನಾನು ನನ್ನ ತಂದೆಯಾದ ಹಝ್ರತ್ ಅಬೂಬಕರ್(ರ)ರಿಗೆ ತಿಳಿಸಿದೆ. ಹಝ್ರತ್ ಪೈಗಂಬರ್(ಸ) ನಿಧನರಾಗಿ ಅವರನ್ನು ಹಝ್ರತ್ ಆಯಿಶ(ರ)ರ ಕೊಠಡಿಯಲ್ಲಿ ದಫನ್ ಮಾಡಲಾದಾಗ, ಹಝ್ರತ್ ಅಬೂಬಕರ್(ರ) ಅವರೊಡನೆ ಹೇಳಿದರು: ಇದು ನೀನು ಕಂಡ ಚಂದ್ರಗಳಲ್ಲಿ ಒಂದು ಚಂದ್ರವಾಗಿದೆ. ಮತ್ತಿದು ಅವುಗಳಲ್ಲಿ ಅತ್ಯುತ್ತಮವಾದುದಾಗಿದೆ.
(ಮೌತಾ ಕಿತಾಬುಲ್ ಜನಾಎಝ್, ಹದೀಸ್–546, ದಾರುಲ್ ಫಿಕರ್ ಬೈರೂತ್ 2002)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಅಬೀ ಲೈಲಾ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಕಪ್ಪು ಆಡುಗಳ ಹಿಂಡು ನನ್ನನ್ನು ಹಿಂಬಾಲಿಸುತ್ತಿದೆ. ಅದರ ಹಿಂದೆ ಬೂದಿ ಬಣ್ಣದ ಆಡುಗಳ ಹಿಂಡು ಇತ್ತು. ಇದನ್ನು ಕೇಳಿ ಹಝ್ರತ ಅಬೂಬಕರ್(ರ) ಹೇಳಿದರು: ಯಾ ರಸೂಲುಲ್ಲಾಹ್, ಅರೇಬಿಯರು ನಿಮ್ಮನ್ನು ಅನುಸರಿಸುವರು. ಅವರ ನಂತರ ಅರೇಬಿಯೇತರರು ನಿಮ್ಮನ್ನು ಅನುಸರಿಸುವರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ದೇವದೂತರು ಕೂಡ ಇದೇ ವ್ಯಾಖ್ಯಾನವನ್ನು ಹೇಳಿರುವರು. (ಮುಸನ್ನಿಫ್ ಇಬ್ನೆ ಅಬೀ ಶೀಬ, ಸಂಪುಟ–10, ಪುಟ–125, ಕಿತಾಬುಲ್ ಈಮಾನ್ ವರ‍್ರುಯಾ, ಹದೀಸ್–31101, ಅಲ್‌ಫಾರೂಖ್ ಲಿಲ್‌ಹದೀಸ್ 2002)

ಇದಾಗಿದೆ ಸ್ವಪ್ನಗಳ ಪ್ರಸ್ತಾಪ.

ಪುರುಷರಲ್ಲಿ ಮೊದಲು ಮುಸ್ಲಿಮರಾದವರು ಎಂಬುದರ ಬಗ್ಗೆ ಪ್ರಸ್ತಾಪವಿದೆ.

ಹಝ್ರತ್ ಅಬೂಬಕರ್(ರ) ಆಗಿದ್ದರು ಎಂದು ಹೇಳಲಾಗುತ್ತದೆ. ಹಝ್ರತ್ ಅಮ್ಮಾರ್ ಬಿನ್ ಯಾಸಿರ್(ರ) ಹೇಳುತ್ತಾರೆ: ನಾನು ಹಝ್ರತ್ ಪೈಗಂಬರ್(ಸ)ರನ್ನು ಆರಂಭ ಕಾಲಘಟ್ಟದಲ್ಲಿ ನೋಡಿದ್ದೇನೆ. ಆಗ ಅವರ ಜೊತೆಗೆ ಕೇವಲ ಐವರು ಗುಲಾಮರು, ಇಬ್ಬರು ಮಹಿಳೆಯರು ಮತ್ತು ಹಝ್ರತ್ ಅಬೂಬಕರ್(ರ) ಇದ್ದರು. (ಸಹೀಹ್ ಬುಖಾರಿ, ಕಿತಾಬ್ ಫಝಾ ಎಲುಸ್ಸಹಾಬ(ಸ), ಹದೀಸ್–3660)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರು ತನ್ನ ಗ್ರಂಥವಾದ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಒಂದು ವಿಶದವಾದ ನೋಟ್ ಬರೆದಿರುವರು. ಅವರು ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ) ತನ್ನ ತಬ್ಲೀಗ್ ಕೆಲಸವನ್ನು ಶುರುಮಾಡಿದಾಗ ಮೊತ್ತಮೊದಲಾಗಿ ವಿಶ್ವಾಸ ಕೈಗೊಂಡವರು ಹಝ್ರತ್ ಖದೀಜ(ರ) ಆಗಿದ್ದರು. ಅವರು ಒಂದು ಕ್ಷಣಕ್ಕೂ ಹಿಂದೆಮುಂದೆ ನೋಡಲಿಲ್ಲ. ಹಝ್ರತ್ ಖದೀಜ(ರ)ರ ನಂತರ ಮೊತ್ತಮೊದಲಾಗಿ ವಿಶ್ವಾಸ ಕೈಗೊಂಡವರ ಕುರಿತು ಚರಿತ್ರೆಗಾರರಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವರು ಹಝ್ರತ್ ಅಬೂಬಕರ್(ರ)ರ ಹೆಸರನ್ನು ಹೇಳುತ್ತಾರೆ. ಕೆಲವರು ಹತ್ತು ವರ್ಷ ಪ್ರಾಯವಿದ್ದ ಹಝ್ರತ್ ಅಲಿ(ರ)ರ ಹೆಸರನ್ನು ಹೇಳುತ್ತಾರೆ. ಕೆಲವರು ಹಝ್ರತ್ ಪೈಗಂಬರ್(ಸ) ಸ್ವತಂತ್ರಗೊಳಿಸಿದ ಗುಲಾಮರಾದ ಹಝ್ರತ್ ಝೈದ್ ಬಿನ್ ಹಾರಿಸರ ಹೆಸರನ್ನು ಹೇಳುತ್ತಾರೆ. ಆದರೆ ನಮ್ಮ ಪ್ರಕಾರ ಈ ಜಗಳ ವ್ಯರ್ಥ. ಹಝ್ರತ್ ಅಲಿ(ರ) ಮತ್ತು ಹಝ್ರತ್ ಝೈದ್ ಬಿನ್ ಹಾರಿಸ(ರ) ಹಝ್ರತ್ ಪೈಗಂಬರ್(ಸ)ರ ಮನೆಯ ಸದಸ್ಯರಾಗಿದ್ದರು. ಅವರ ಮಕ್ಕಳ ಹಾಗೆ ಅವರ ಜೊತೆಗೆ ಇದ್ದರು. ಹಝ್ರತ್ ಪೈಗಂಬರ್(ಸ) ಹೇಳಿದ ಕೂಡಲೇ ಅವರನ್ನು ನಂಬಿಕೊಂಡಿದ್ದರು. ಅವರ ಕಡೆಯಿಂದ ನಾಲಗೆಯಿಂದ ಒಪ್ಪಿಗೆ ಹೇಳಬೇಕಾದ ಆವಶ್ಯಕತೆಯಿರಲಿಲ್ಲ. ಆದ್ದರಿಂದ ಅವರ ಹೆಸರುಗಳನ್ನು ಮಧ್ಯೆದಲ್ಲಿ ತರುವ ಆವಶ್ಯಕತೆಯಿರಲಿಲ್ಲ. ಉಳಿದವರಲ್ಲಿ ಹಝ್ರತ್ ಅಬೂಬಕರ್(ರ) ಮೊತ್ತ ಮೊದಲ ಸತ್ಯವಿಶ್ವಾಸಿಯಾಗಿದ್ದರು ಎಂಬುದು ಸಮ್ಮತನೀಯವಾದ ಕಾರ್ಯವಾಗಿದೆ.

ಹಝ್ರತ್ ಅಬೂಬಕರ್(ರ) ತನ್ನ ಸಭ್ಯತೆ ಮತ್ತು ಯೋಗ್ಯತೆಯ ಕಾರಣದಿಂದ ಖುರೈಶಿನಲ್ಲಿ ಬಹಳ ಗೌರವಾನ್ವಿತ ಮತ್ತು ಆದರಣೀಯ ವ್ಯಕ್ತಿಯಾಗಿದ್ದರು. ಬೇರೆ ಯಾವುದೇ ಸಹಾಬಿಯರಿಗೆ ಇಲ್ಲದ ಸ್ಥಾನ ಅವರಿಗೆ ಇಸ್ಲಾಮಿನಲ್ಲಿತ್ತು. ಹಝ್ರತ್ ಪೈಗಂಬರ್(ಸ)ರ ವಾದದಲ್ಲಿ ಹಝ್ರತ್ ಅಬೂಬಕರ್(ರ) ಒಂದು ಕ್ಷಣಕ್ಕೂ ಸಂಶಯಪಡಲಿಲ್ಲ. ಆಲಿಸದ ಕೂಡಲೇ ವಿಶ್ವಾಸ ಕೈಗೊಂಡರು. ಅನಂತರ ತನ್ನ ಎಲ್ಲ ಗಮನ, ತನ್ನ ಜೀವ ಮತ್ತು ಸಂಪತ್ತನ್ನು ಹಝ್ರತ್ ಪೈಗಂಬರ್(ಸ) ತನ್ನ ಧರ್ಮದ ಸೇವೆಗಾಗಿ ಸಮರ್ಪಿಸಿಕೊಂಡರು. ಹಝ್ರತ್ ಪೈಗಂಬರ್(ಸ)ರಿಗೆ ತನ್ನ ಸಹಾಬಿಯರಲ್ಲಿ ಹಝ್ರತ್ ಅಬೂಬಕರ್(ರ) ಅತ್ಯಂತ ಪ್ರಿಯರಾಗಿದ್ದರು. ಅವರ ನಿಧನದ ನಂತರ ಅವರ ಮೊದಲ ಖಲೀಫರಾದರು. ತನ್ನ ಖಿಲಾಫತಿನ ಕಾಲದಲ್ಲೂ ಹಝ್ರತ್ ಅಬೂಬಕರ್(ರ) ಅಸಾಮಾನ್ಯವಾದ ಯೋಗ್ಯತೆಯನ್ನು ತೋರಿಸಿದರು. ಹಝ್ರತ್ ಅಬೂಬಕರ್(ರ)ರ ಕುರಿತು ಯುರೋಪಿನ ಪ್ರಸಿದ್ಧ ಒರಿಯನ್ಟಲಿಸ್ ಆದ ಸ್ಪ್ರಿಂಗರ್ ಹೇಳುತ್ತಾರೆ: ಇಸ್ಲಾಮಿನ ಆರಂಭ ಕಾಲದಲ್ಲಿ ಹಝ್ರತ್ ಅಬೂಬಕರ್(ರ) ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ವಿಶ್ವಾಸ ಕೈಗೊಂಡದ್ದು ಸಾಬೀತುಪಡಿಸುವುದೇನೆಂದರೆ, ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮೋಸಗೊಳ್ಳಲ್ಪಟ್ಟವರಾಗಿದ್ದರೂ ಮೋಸ ಮಾಡುವವರಾಗಿರಲಿಲ್ಲ. ಸತ್ಯಹೃದಯದಿಂದ ತನ್ನನ್ನು ಅಲ್ಲಾಹನ ಪ್ರವಾದಿಯನ್ನು ದೃಢವಾಗಿ ನಂಬಿದ್ದರು.

ಹಝ್ರತ್ ಖದೀಜ(ರ), ಹಝ್ರತ್ ಅಬೂಬಕರ್(ರ), ಹಝ್ರತ್ ಅಲಿ(ರ), ಹಝ್ರತ್ ಝೈದ್ ಬಿನ್ ಹಾರಿಸ(ರ) ಮುಸ್ಲಿಮರಾದ ನಂತರ ಹಝ್ರತ್ ಪೈಗಂಬರ್(ಸ)ರ ತಬ್ಲೀಗಿನ ಕಾರಣದಿಂದ ಐದು ವ್ಯಕ್ತಿಗಳು ವಿಶ್ವಾಸ ಕೈಗೊಂಡಿದ್ದರು. ಈ ಎಲ್ಲರೂ ಇಸ್ಲಾಮಿನ ಶ್ರೇಷ್ಠ ಮತ್ತು ಉನ್ನತ ಮಟ್ಟದ ಸಹಾಬಿಗಳಾಗಿದ್ದರು. ಅವರ ಹೆಸರುಗಳು ಹೀಗಿವೆ: ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ), ಅಬ್ದುರ್ರಹ್ಮಾನ್ ಬಿನ್ ಔಫ್(ರ), ಸಅದ್ ಬಿನ್ ಅಬೀ ವಖಾಸ್(ರ), ಝುಬೇರ್ ಬಿನ್ ಅವಾಮ್(ರ), ತಲ್‌ಹ ಬಿನ್ ಉಬೈದುಲ್ಲಾಹ್(ರ). ಈ ಐದು ಸಹಾಬಿಯರು ಸ್ವರ್ಗದ ಸುವಾರ್ತೆ ಲಭಿಸಿದ ಹತ್ತು ಸೌಭಾಗ್ಯಶಾಲಿಗಳಲ್ಲಿ ಸೇರಿದ್ದರು. ಅವರು ಹಝ್ರತ್ ಪೈಗಂಬರ್(ಸ)ರ ಅತ್ಯಂತ ನಿಕಟ ಸಹಾಬಿಯರು ಮತ್ತು ಸಲಹೆಗಾರರು ಆಗಿದ್ದರು. (ಸೀರತ್ ಖಾತಮುನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–121–123)

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದೆಡೆ ಬರೆಯುತ್ತಾರೆ:

ಸತ್ಯವಿಶ್ವಾಸಿಗಳು ಧನತ್ಯಾಗದ ಆಹ್ವಾನವನ್ನು ಕೇಳಿ ಹೆದರುವುದಿಲ್ಲ. ಬದಲಾಗಿ ಸಂತೋಷಗೊಳ್ಳುತ್ತಾರೆ. ಈ ಆಹ್ವಾನದ ವಾರ್ತೆ ಮೊಟ್ಟಮೊದಲು ನಮಗೆ ಲಭಿಸಿದೆ ಎಂದು ಹೇಳಿ ಅಭಿಮಾನಪಡುತ್ತಾರೆ. ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾರೆ ಮತ್ತು ಹೆಚ್ಚು ಹೆಚ್ಚಾಗಿ ಅಲ್ಲಾಹನ ಮಾರ್ಗದಲ್ಲಿ ತ್ಯಾಗಗಳನ್ನು ಮಾಡುತ್ತಾರೆ. ಹೀಗೆ ಎಲ್ಲರಿಗಿಂತ ಉನ್ನತ ಸ್ಥಾನವನ್ನು ಕೂಡ ಪಡೆಯುತ್ತಾರೆ. ಹಝ್ರತ್ ಅಬೂಬಕರ್(ರ)ರಿಗೆ ಸೇವೆಯ ಸಂದರ್ಭಗಳು ಮತ್ತು ತ್ಯಾಗಗಳ ಸಂದರ್ಭಗಳು ಲಭಿಸಿದಾಗ, ನನಗೆ ಏಕೆ ಮೊಟ್ಟಮೊದಲು ಈ ಎಲ್ಲ ತ್ಯಾಗಗಳನ್ನು ಮಾಡುವಂತೆ ಆಯಿತು ಎಂದು ಯೋಚಿಸಿ ದುಃಖಿಸಿರಲು ಸಾಧ್ಯವೇ? ಅವರಂತು ಬಹಳ ಸಂತೋಷದಿಂದ ತನ್ನನ್ನು ತಾವು ಅಪಾಯದಲ್ಲಿ ಹಾಕಿದರು ಮತ್ತು ಅಲ್ಲಾಹನ ಮಾರ್ಗದಲ್ಲಿ ಕಷ್ಟತೆಗಳನ್ನು ಅನುಭವಿಸಿದರು. ಆದ್ದರಿಂದ ಅವರು ಹಝ್ರತ್ ಉಮರ್(ರ) ಕೂಡ ಗಳಿಸದಂತಹ ಸ್ಥಾನವನ್ನು ಪಡೆದರು. ಏಕೆಂದರೆ, ಮೊದಲು ಸತ್ಯವಿಶ್ವಾಸ ಕೈಗೊಂಡವರಿಗೆ ಮೊತ್ತಮೊದಲು ತ್ಯಾಗಮಾಡಲು ಸಂದರ್ಭ ಲಭಿಸುತ್ತದೆ. ಅಪಾಯಗಳು ಹಝ್ರತ್ ಉಮರ್(ರ) ಸತ್ಯವಿಶ್ವಾಸ ಕೈಗೊಂಡ ಸಮಯದಲ್ಲೂ ಇದ್ದುವು. ತೊಂದರೆಗಳು ನೀಡಲಾಗುತ್ತಿದ್ದುವು. ನಮಾಝ್‌ಗಳನ್ನು ನಿರ್ವಹಿಸಲು ಬಿಡುತ್ತಿರಲಿಲ್ಲ. ಸಹಾಬಿಯರಿಗೆ ತಮ್ಮ ಸ್ವದೇಶವನ್ನು ತೊರೆಯಬೇಕಾಗಿ ಬರುತ್ತಿತ್ತು. ಅಬೀಸೀನಿಯಗೆ ಹಿಜ್ರತ್ ಮಾಡಬೇಕಾಗಿ ಬಂದಿತ್ತು. ಪ್ರಗತಿಯ ಕಾಲಘಟ್ಟವು ಅವರೆಲ್ಲ ವಿಶ್ವಾಸ ಕೈಗೊಂಡ ಬಹಳ ನಂತರ ಆರಂಭವಾಗಿತ್ತು. ಆದರೆ ಹಝ್ರತ್ ಅಬೂಬಕರ್(ರ)ರಿಗೆ ಎಲ್ಲರಿಗಿಂತ ಮುಂಚೆ ವಿಶ್ವಾಸ ಕೈಗೊಳ್ಳಲು ಸಂದರ್ಭ ಸಿಕ್ಕಿದ ಕಾರಣದಿಂದ ಬೇರೆಯವರಿಗೆ ಸಿಗದಂತಹ ಸ್ಥಾನ ಲಭಿಸಿತ್ತು. ಹಝ್ರತ್ ಉಮರ್(ರ)ರಿಗೆ ಅವರಿಗೆ ಸಮಾನವಾಗಲು ಸಾಧ್ಯವಾಗಲಿಲ್ಲ. ಆದ್ದರಿಂದಲೇ ಒಂದು ಬಾರಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ನಡುವೆ ಜಗಳ ಉಂಟಾದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: ನೀವೆಲ್ಲರೂ ಇಸ್ಲಾಮನ್ನು ನಿರಾಕರಿಸುತ್ತಿದ್ದಾಗ ಅಬೂಬಕರ್(ರ) ಇಸ್ಲಾಂ ಸ್ವೀಕಾರ ಮಾಡಿಕೊಂಡಿದ್ದರು. ನೀವು ಇಸ್ಲಾಮಿನ ವಿರೋಧ ಮಾಡುತ್ತಿದ್ದಾಗ ಅವರು ಇಸ್ಲಾಮಿನ ಸಹಾಯವನ್ನು ಮಾಡಿದರು. ಈಗ ನೀವೇಕೆ ಅವರಿಗೆ ದುಃಖವನ್ನು

ಕೊಡುತ್ತಿದ್ದೀರಿ. ಮಕ್ಕಾ ವಿಜಯದ ವೇಳೆ ವಿಶ್ವಾಸ ಕೈಗೊಂಡರೆ ಸಾಕಾಗಿತ್ತು ಎಂದು ಹಝ್ರತ್ ಅಬೂಬಕರ್(ರ) ಬಯಸುತ್ತಿದ್ದರು ಎಂದು ಯಾರಿಗಾದರೂ ಹೇಳಲು ಸಾಧ್ಯವೇ? ಬದಲಾಗಿ ಮೊಟ್ಟಮೊದಲಾಗಿ ವಿಶ್ವಾಸ ಕೈಗೊಂಡದ್ದಕ್ಕೆ ಬದಲಾಗಿ ಅವರಿಗೆ ಲೋಕದ ಆಡಳಿತ ಲಭಿಸಿದರೂ ಅವರು ಅದನ್ನು ತುಳಿದು ಹಾಕುತ್ತಿದ್ದರು. (ಮನ್ ಅನ್ಸಾರಿ ಇಲಲ್ಲಾಹ್, ಅನ್ವಾರುಲ್ ಉಲೂಮ್, ಸಂಪುಟ–9, ಪುಟ–30–31)

ಗುಲಾಮರನ್ನು ಸ್ವತಂತ್ರಗೊಳಿಸಿದ ಬಗ್ಗೆ ಬರೆಯಲಾಗಿದೆ. ಹಝ್ರತ್ ಉಮರ್(ರ) ಹೀಗೆ ಹೇಳುತ್ತಿದ್ದರು: ಅಬೂಬಕರ್(ರ) ನಮ್ಮ ಸರದಾರರಾಗಿರುವರು. ಅವರು ನಮ್ಮ ಸರದಾರರಾದ ಬಿಲಾಲ್(ರ)ರನ್ನು ಸ್ವತಂತ್ರಗೊಳಿಸಿದರು. ಹಝ್ರತ್ ಅಬೂಬಕರ್(ರ) ಇಸ್ಲಾಮಿನ ಆರಂಭದಲ್ಲಿ ತನ್ನ ಸಂಪತ್ತಿನಿಂದ ಏಳು ಗುಲಾಮರನ್ನು ಸ್ವತಂತ್ರಗೊಳಿಸಿದರು. ಅಲ್ಲಾಹನನ್ನು ನಂಬಿದ ಕಾರಣದಿಂದ ಅವರಿಗೆ ತೊಂದರೆ ಕೊಡಲಾಗುತ್ತಿತ್ತು. ಆ ಗುಲಾಮರ ಹೆಸರುಗಳು ಹೀಗಿವೆ: ಹಝ್ರತ್ ಬಿಲಾಲ್(ರ), ಆಮಿರ್ ಬಿನ್ ಫುಹೈರ(ರ), ಝುನೀರ(ರ), ನಹ್‌ದಿಯ(ರ), ಅವರ ಮಗಳಾದ ಬನೀ ಮೋಮಲ್ ಮತ್ತು ಉಮ್ಮೇ ಉವೈಸ್. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–3, ಪುಟ–247, ದಾರುಲ್ ಫಿಕರ್ ಬೈರೂತ್ 2001)

ವಿರೋಧಿಗಳು ಸಹ ಹಝ್ರತ್ ಅಬೂಬಕರ್(ರ)ರವರ ಒಳಿತು ಮತ್ತು ಸಭ್ಯತೆಯನ್ನು ಒಪ್ಪುತ್ತಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ "ಇಡೀ ಮಕ್ಕ ಹಝ್ರತ್ ಅಬೂಬಕರ್(ರ)ರವರ ಉಪಕಾರದಲ್ಲಿ ಕೃತಜ್ಞರಾಗಿದ್ದರು. ಅವರು ಗಳಿಸುತ್ತಿದ್ದನ್ನು ಗುಲಾಮರನ್ನು ಸ್ವತಂತ್ರಗಪಳಿಸುವಲ್ಲಿ ಖರ್ಚು ಮಾಡುತ್ತಿದ್ದರು. ಒಮ್ಮೆ ಹಝ್ರತ್ ಅಬೂಬಕರ್(ರ) ಮಕ್ಕವನ್ನು ಬಿಟ್ಟು ಹೋಗುತ್ತಿದ್ದರು. ಒಬ್ಬ ಸರದಾರ ಮಾರ್ಗದಲ್ಲಿ ಭೇಟಿಯಾದನು. ಅಬೂಬಕರ್, ನೀವೆಲ್ಲಿಗೆ ಹೋಗುತ್ತಿದ್ದೀರಿ ಎಂದು ಕೇಳಿದರು. ಅವರು ಹೇಳಿದರು: ಈ ಪಟ್ಟಣದಲ್ಲಿ ನನಗೀಗ ಅಭಯವಿಲ್ಲ. ಆದ್ದರಿಂದ ನಾನು ಎಲ್ಲಿಗಾದರೂ ಹೋಗುತ್ತಿದ್ದೇನೆ. ಆ ಸರದಾರ ಹೇಳಿದನು: ನಿಮ್ಮಂತಹ ಸಾತ್ವಿಕ ವ್ಯಕ್ತಿ ಪಟ್ಟಣದಿಂದ ಹೊರಟು ಹೋದರೆ ಈ ಪಟ್ಟಣ ನಾಶವಾಗುವುದು. ನಾನು ನಿಮಗೆ ಅಭಯವನ್ನು ನೀಡುತ್ತೇನೆ. ನೀವು ಪಟ್ಟಣವನ್ನು ಬಿಟ್ಟು ಹೋಗಬೇಡಿರಿ. ಹೀಗೆ ಅವರು ಆ ಸರದಾರನ ಅಭಯದಲ್ಲಿ ಮರಳಿ ಬಂದರು. ಅವರು ಬೆಳಿಗ್ಗೆ ಎದ್ದು ಪವಿತ್ರ ಖುರ್‌ಆನ್ ಓದುತ್ತಿದ್ದರು. ಮಹಿಳೆಯರು ಮತ್ತು ಮಕ್ಕಳು ಗೋಡೆಗೆ ಕಿವಿಯಿಟ್ಟು ಪವಿತ್ರ ಖುರ್‌ಆನ್ ಓದುವುದನ್ನು ಆಲಿಸುತ್ತಿದ್ದರು. ಏಕೆಂದರೆ ಅವರ ಸ್ವರದಲ್ಲಿ ಬಹಳ ವೇದನೆ ಮತ್ತು ನೋವು ಇತ್ತು. ಪವಿತ್ರ ಖುರ್‌ಆನ್ ಅರಬಿ ಭಾಷೆಯಲ್ಲಿ ಆಗಿದ್ದ ಕಾರಣದಿಂದ ಅಲ್ಲಿಯ ಪ್ರತಿ ಮಹಿಳೆ, ಪುರುಷ ಮತ್ತು ಮಗು ಅದನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಈ ಮಾತು ಹರಡಿದಾಗ, ಮಕ್ಕದಲ್ಲಿ ಗದ್ದಲವುಂಟಾಯಿತು. ಈ ರೀತಿಯಾಗಿ ಜನರು ಧರ್ಮವನ್ನು ತೊರೆಯುವರು ಎಂದು ಹೇಳಿದರು. ಕೊನೆಗೆ ಜನರು ಸರದಾರನ ಬಳಿಗೆ ಹೋದರು. ನೀವೇಕೆ ಹಝ್ರತ್ ಅಬೂಬಕರ್(ರ)ರನ್ನು ಅಭಯದಲ್ಲಿ ಇರಿಸಿದ್ದೀರಿ ಎಂದು ಕೇಳಿದರು. ಕೊನೆಗೆ ಆ ಸರದಾರ ಹಝ್ರತ್ ಅಬೂಬಕರ್(ರ)ರೊಡನೆ ಹೀಗೆ ಹೇಳಿದರು: ನೀವು ಈ ರೀತಿಯಾಗಿ ಪವಿತ್ರ ಖುರ್‌ಆನ್ ಓದಬೇಡಿರಿ. ಮಕ್ಕದ ಜನರು ಅದರಿಂದ ಕೋಪಗೊಂಡಿದ್ದಾರೆ. ಹಝ್ರತ್ ಅಬೂಬಕರ್(ರ) ಹೇಳಿದರು: ಹಾಗಾದರೆ ನೀವು ನಿಮ್ಮ ಅಭಯವನ್ನು ಮರಳಿ ಪಡೆಯಿರಿ. ನಾನು ಅದರಿಂದ ಹಿಂದೆ ಸರಿಯಲಾರೆನು. ಹೀಗೆ ಆ ಸರದಾರನು ತಾನು ಕೊಟ್ಟ ಅಭಯವನ್ನು ಮರಳಿ ಪಡೆದನು. ಇದು ಹಝ್ರತ್ ಅಬೂಬಕರ್(ರ)ರ ದೇವಭಕ್ತಿ ಮತ್ತು ಪರಿಶುದ್ಧತೆಗೆ ಎಂತಹ ಪ್ರಬಲ ಪುರಾವೆಯಾಗಿದೆ. ಆ ಜನರು ಹಝ್ರತ್ ಪೈಗಂಬರ್(ಸ)ರ ಕಠಿಣ ವಿರೋಧಿಗಳಾಗಿದ್ದರು. ಅವರನ್ನು ಬೈಯ್ಯುತ್ತಿದ್ದರು. ಆದರೆ ಅಬೂಬಕರ್(ರ)ರ ಪರಿಶುದ್ಧತೆಯನ್ನು ಒಪ್ಪಿಕೊಂಡಿದ್ದರು. ನೀವು ಹೋದರೆ ಪಟ್ಟಣ ನಾಶವಾಗುವುದು ಎಂದು ಆ ಸರದಾರ ಹೇಳಿದನು. (ತಫ್ಸೀರೆ ಕಬೀರ್, ಸಂಪುಟ–10, ಪುಟ–327)

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಪಸ್ಥಿತರಾಗಿ ಇಲ್ಲದ ಸಂದರ್ಭಗಳಲ್ಲಿ ಕೆಲವು ಸಹಾಬರನ್ನು ಮಸ್‌ಜಿದ್ ನಬವಿಯಲ್ಲಿ ನಮಾಝ್‌ಗೆ ನೇತೃತ್ವ ವಹಿಸಲು ನೇಮಿಸಲಾಗಿತ್ತು. ಅವರಲ್ಲಿ ಹಝ್ರತ್ ಅಬೂಬಕರ್(ರ) ಒಬ್ಬರಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೊನೆಯ ದಿನಗಳಲ್ಲಿ ರೋಗ ಬಾಧಿತರಾಗಿದ್ದಾಗ ಅವರ ನಿರ್ದೇಶ ಪ್ರಕಾರ ಹಝ್ರತ್ ಅಬೂಬಕರ್(ರ) ನಮಾಝ್‌ಗೆ ನೇತೃತ್ವ ವಹಿಸುವ ಭಾಗ್ಯ ಪಡೆದಿದ್ದರು. ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಬೂಬಕರ್(ರ) ಉಪಸ್ಥಿತರಿರುವಾಗ ಬೇರೆ ಯಾರಾದರೂ ನಮಾಝ್‌ಗೆ ಇಮಾಮತ್ ವಹಿಸುವುದು ಸರಿಯಲ್ಲ. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3673)

ಅಸ್ವದ್ ಹೇಳುತ್ತಾರೆ: ನಾವು ಹಝ್ರತ್ ಆಯಿಷಾ(ರ) ಅವರೊಂದಿಗೆ ಇದ್ದೆವು ಅಷ್ಟರಲ್ಲಿ ನಾವು ನಮಾಝ್‌ನ ನಿಯಮಿತತೆ ಮತ್ತು ಅದರ ಶ್ರೇಷ್ಠತೆಯನ್ನು ಪ್ರಸ್ತಾಪಿಸುತ್ತಿದ್ದಾಗ ಅವರು ಹೇಳಿದರು ರಸೂಲುಲ್ಲಾಹ್(ಸ)ರವರು ನಿಧನ ಹೊಂದಿದ ರೋಗದಲ್ಲಿದ್ದಾಗ ನಮಾಝ್‌ನ ಸಮಯವಾದಾಗ ಅಝಾನ್ ನೀಡಲಾಯಿತು. ರಸೂಲುಲ್ಲಾಹ್(ಸ) ಹೇಳಿದರು: ಅಬೂಬಕರ್(ರ) ಅವರಿಗೆ ನಮಾಝ್ ನಿರ್ವಹಿಸಲು ಹೇಳಿರಿ. ಅಬೂಬಕರ್ ಮೃದು ಹೃದಯಿಯಾಗಿದ್ದಾರೆ ಎಂದು ಹುಝೂರ್(ಸ) ಅವರಿಗೆ ಹೇಳಲಾಯಿತು. ಅವರು ನಿಮ್ಮ ಸ್ಥಳದಲ್ಲಿ ನಿಂತಾಗ, ಅವರು ಜನರನ್ನು ನಮಾಝ್ ಮಾಡಿಸಲು ಸಾಧ್ಯವಾಗುವುದಿಲ್ಲ. ರಸೂಲುಲ್ಲಾಹ್(ಸ) ಮತ್ತೆ ಹೇಳಿದರು, ಪುನಃ ರಸೂಲುಲ್ಲಾಹ್(ಸ.ಅ) ಅವರಿಗೆ ಅದೇ ವಿಷಯವನ್ನು ಹೇಳಲಾಯಿತು, ಅಂದರೆ "ಅವರು ಮೃದು ಹೃದಯಿಯಾಗಿದ್ದಾರೆ" ಎಂದು. ರಸೂಲುಲ್ಲಾಹ್(ಸ) ರವರು ಅದನ್ನು ಮೂರನೇ ಬಾರಿ ಹೇಳಿದರು ಮತ್ತು ನೀವು ಯೂಸುಫ್‌ನ ಕಾವಲುಗಾರರಾಗಿದ್ದೀರಿ. ಅಂದರೆ, ನೀವು ಈ ರೀತಿ ಮಾತನಾಡುತ್ತಿದ್ದೀರಿ.

ಜನರನ್ನು ಪ್ರಾರ್ಥನೆಯಲ್ಲಿ ಮುನ್ನಡೆಸಲು ಅಬೂಬಕರ್‌ಗೆ ಹೇಳಿ.

ಆಗ ಹಝ್ರತ್ ಅಬೂಬಕರ್(ರ) ಅವರು ನಮಾಝನ್ನು ನಿರ್ವಹಿಸಲು ಹೊರಟರು. ರಸೂಲುಲ್ಲಾಹ್(ಸ) ಅವರ ಆರೋಗ್ಯದಲ್ಲಿ ಸ್ವಲ್ಪ ಉತ್ತಮತೆಯನ್ನು ಅನುಭವಿಸಿದಾಗ, ಅವರು(ಸ) ಹೊರಬಂದರು ಮತ್ತು ಅವರು(ಸ) ಇಬ್ಬರು ವ್ಯಕ್ತಿಗಳ ಸಹಾಯದಿಂದ ನಿಂತಿದ್ದರು. ಅವರು ಹೇಳುತ್ತಾರೆ, ಅನಾರೋಗ್ಯದಿಂದ ಅವರ ಪಾದಗಳು ನೆಲದ ಮೇಲೆ ಗೆರೆಗಳನ್ನು ಮಾಡುತ್ತಿದ್ದುದನ್ನು ನಾನು ಈಗಲೂ ನೋಡುತ್ತಿದ್ದೇನೆ, ಅಂದರೆ ಅವರಿಗೆ(ಸ) ಸರಿಯಾಗಿ ನಡೆಯಲು ಸಾಧ್ಯವಾಗಲಿಲ್ಲ. ಅವರು ತಮ್ಮ ಪಾದಗಳನ್ನು ಎತ್ತಲು ಸಾಧ್ಯವಾಗುತ್ತಿರಲಿಲ್ಲ, ಆದ್ದರಿಂದ ಅವರ ಪಾದಗಳು ನೆಲವನ್ನು ಅಗೆಯುತ್ತಿದ್ದವು. ಹಝ್ರತ್ ಅಬೂಬಕರ್(ರ) ಅವರು ರಸೂಲುಲ್ಲಾಹ್(ಸ) ಅವರಿಗೆ ಈ ರೀತಿ ಬರುವುದನ್ನು ಕಂಡಾಗ ಅವರು ಹಿಂದಕ್ಕೆ ಸರೆಯಬೇಕೆಂದು ಬಯಸಿದ್ದರು, ಆದರೆ ರಸೂಲುಲ್ಲಾಹ್(ಸ) ಅವರು ತಮ್ಮ ಸ್ಥಳದಲ್ಲಿ ಉಳಿಯಲು ಸೂಚಿಸಿದರು. ನಂತರ ಅವರು ಹಝ್ರತ್ ಅಬೂಬಕರ್(ರ) ಅವರ ಪಕ್ಕದಲ್ಲಿ ಕುಳಿತುಕೊಂಡರು. ರಸೂಲುಲ್ಲಾಹ್(ಸ) ಅವರು ನಮಾಝನ್ನು ನಿರ್ವಹಿಸುತ್ತಿದ್ದಾರೆಯೇ ಎಂದು ಅಮಿಶ್‌ಗೆ ಕೇಳಲಾಯಿತು ಮತ್ತು ಹಝ್ರತ್ ಅಬುಬಕರ್(ರ) ಅವರು ರಸೂಲುಲ್ಲಾಹ್(ಸ) ಅವರನ್ನು ಅನುಸರಿಸಿ ನಮಾಝ್ ನಿರ್ವಹಿಸುತ್ತಿದ್ದರು ಹಝ್ರತ್ ಅಬೂಬಕರ್(ರ)ರವರನ್ನು ಅನುಸರಿಸಿ ಜನರು ನಮಾಝ್ ನಿರ್ವಹಿಸುತ್ತಿದ್ದರು. ಅವರು ಹೌದು ಎಂದು ಸೂಚಿಸಿದರು. ರಸೂಲುಲ್ಲಾಹ್(ಸ) ಅವರು ಹಝ್ರತ್ ಅಬೂಬಕರ್(ರ) ಅವರ ಎಡಭಾಗದಲ್ಲಿ ಕುಳಿತಿದ್ದರು ಮತ್ತು ಹಝ್ರತ್ ಅಬೂಬಕರ್(ರ) ಅವರು ನಿಂತು ನಮಾಝ್ ನಿರ್ವಹಿಸುತ್ತಿದ್ದರು. (ಸಹೀಹ್ ಅಲ್–ಬುಖಾರಿ, ಕಿತಾಬ್ ಅಲ್–ಅಝಾನ್, ಹದೀಸ್ ಸಂಖ್ಯೆ–664)

ಹಝ್ರತ್ ಅನಸ್ ಬಿನ್ ಮಲಿಕ್ ಅನ್ಸಾರಿ(ರ), ಈ ವರದಿ ಹೇಳುತ್ತಾರೆ, ನನಗೆ ಹೇಳಿದರು. ಅವರು ರಸೂಲುಲ್ಲಾಹ್(ಸ) ಅವರನ್ನು ಅನುಸರಿಸಿದರು ಮತ್ತು ಸೇವೆ ಸಲ್ಲಿಸಿದರು ಮತ್ತು ಅವರ ಸಹವಾಸದಲ್ಲಿದ್ದರು. ಹಝ್ರತ್ ಅಬುಬಕರ್(ರ) ಅವರು ರಸೂಲುಲ್ಲಾಹ್(ಸ) ಅವರ ಅನಾರೋಗ್ಯದ ಸಮಯದಲ್ಲಿ ಜನರನ್ನು ನಮಾಝ್ ನಿರ್ವಹಿಸುತ್ತಿದ್ದರು ಎಂದು ಹೇಳಿದರು, ಅವರು ನಮಾಝ್‌ನ ಸಾಲುಗಳಲ್ಲಿದ್ದಾಗ ರಸೂಲುಲ್ಲಾಹ್(ಸ) ಅವರ ಕೋಣೆಯ ಪರದೆಯನ್ನು ತೆರೆದರು. ನೀವು(ಸ) ನಮ್ಮನ್ನು ನಿಂತು ನೋಡುತ್ತಿದ್ದರು. ಅವರ ಅನುಗ್ರಹದಾಯಕ ಮುಖವು ಪವಿತ್ರ ಖುರ್‌ಆನ್‌ನ ಪುಟವಾಗಿದೆಯಂತೆ ತೋರುತ್ತಿತ್ತು. ಆಗ ಪ್ರವಾದಿ(ಸ) ಸಂತೋಷದಿಂದ ಮುಗುಳ್ನಗುತ್ತಾ ನೋಡಿದರು ಮತ್ತು ಪ್ರವಾದಿ(ಸ.ಅ)ರವರನ್ನು ನೋಡಿ ನಾವು ಸಂತೋಷದಿಂದ ಆಮಿಷಕ್ಕೆ ಒಳಗಾಗಿದ್ದೇವೆ ಎಂದು ಕೊಂಡೆವು. ಇಷ್ಟರಲ್ಲಿ ಹಝ್ರತ್ ಅಬೂಬಕರ್(ರ.ಅ) ಅವರು ಸಾಲಲ್ಲಿ ಸೇರಲು ತಮ್ಮ ಹಿಮ್ಮಡಿಯಿಂದ ಹಿಂದೆ ಸರಿದರು ಮತ್ತು ಅವರು ಪ್ರವಾದಿ(ಸ) ನಮಾಝಿಗಾಗಿ ಹೊರಬರುತ್ತಿದ್ದಾರೆ ಎಂದು ಭಾವಿಸಿದರು, ಆದರೆ ಪ್ರವಾದಿ(ಸ) ಅವರು ತಮ್ಮ ನಮಾಝನ್ನು ಪೂರ್ಣಗೊಳಿಸಲು ಸೂಚಿಸಿದರು. ಮತ್ತು ಪರದೆಯನ್ನು ಹಾಕಿದರು ಮತ್ತು ಅವರು ಅದೇ ದಿನ ನಿಧನರಾದರು. (ಸಹೀಹ್ ಅಲ್–ಬುಖಾರಿ, ಕಿತಾಬ್ ಅಲ್–ಅಝಾನ್, ಹದೀಸ್ ಸಂಖ್ಯೆ–680)

ಹಝ್ರತ್ ಅಬೂಬಕರ್(ರ)ರಿಗೆ ತನ್ನ ಮಕ್ಕಳೊಡನೆ ಬಹಳ ಪ್ರೀತಿಯಿತ್ತು. ತನ್ನ ಮಾತು ಮತ್ತು ಕೃತಿಯಿಂದ ಅದನ್ನು ಅವರು ಪ್ರಕಟಿಸುತ್ತಿದ್ದರು. ಹಿರಿಯ ಪುತ್ರನಾದ ಹಝ್ರತ್ ಅಬ್ದುರ್ರಹ್ಮಾನ್ ಬೇರೆ

ಮನೆಯನ್ನು ಮಾಡಿಕೊಂಡಿದ್ದರು ಆದರೆ ಅವರ ಮನೆಯ ಖರ್ಚನ್ನು ಹಝ್ರ್‌ರತ ಅಬೂಬಕರ್(ರ) ಸ್ವತಃ ಹೊತ್ತುಕೊಂಡಿದ್ದರು.

ಹಝ್ರ್‌ರತ್ ಅಬ್ದುಲ್ಲಾಹ್ ಬಿನ ಅಬೂಬಕರ್(ರ)ರಿಗೆ ತನ್ನ ಪತ್ನಿಯಾದ ಆತಿಕರೊಂದಿಗೆ ಬಹಳ ಪ್ರೀತಿಯಿತ್ತು. ಆದ ಕಾರಣದಿಂದ ಅವರು ಜಿಹಾದಿಗೆ ಹೋಗುವುದನ್ನು ಬಿಟ್ಟುಕೊಂಡಿದ್ದರು. ಅದನ್ನು ಹಝ್ರ್‌ರತ್ ಅಬೂಬಕರ್(ರ)ರಿಗೆ ಸಹಿಸಲು ಸಾಧ್ಯವಾಗಿರಲಿಲ್ಲ. ಅವರು ಹೇಳಿದರು: ನೀನು ಪತ್ನಿಯ ಕಾರಣದಿಂದ ಜಿಹಾದಿಗೆ ಹೋಗುವುದನ್ನು ಬಿಟ್ಟುಕೊಂಡಿದ್ದೀಯ. ಆದ್ದರಿಂದ ನೀನು ಅವಳಿಗೆ ತಲಾಕ್ ನೀಡು. ಹೀಗೆ ಅವರ ಆದೇಶವನ್ನು ಅವರು ಅನುಸರಿಸಿಕೊಂಡರು. ಆದರೆ ಆತಿಕದ ಬೇರ್ಪಡಿಕೆಯ ಕಾರಣದಿಂದ ನೋವುಭರಿತ ಪದ್ಯಗಳನ್ನು ಹಾಡಿದರು. ಹಝ್ರ್‌ರತ್ ಅಬೂಬಕರ್(ರ)ರ ಕಿವಿಗೆ ಈ ಪದ್ಯಗಳು ಮುಟ್ಟಿದುವು. ಆಗ ಅವರಿಗೆ ದುಃಖವಾಯಿತು. ಮರಳಿ ಮದುವೆ ಮಾಡಿಕೊಳ್ಳಲು ಹಝ್ರ್‌ರತ್ ಅಬ್ದುಲ್ಲಾಹ್‌ರಿಗೆ ಅನುಮತಿ ಕೊಟ್ಟರು. (ಸೀರ'ತ್ ಖಲೀಫತುರ್ರಸೂಲ್(ಸ) ಹಝ್ರ್‌ರತ್ ಅಬೂಬಕರ್ ಸೀದ್ದೀಖ್(ರ), ತಾಲಿಬ್ ಹಾಶ್ಮಿ, ಪುಟ-349-351, ಹಸನಾತ್ ಅಕಾಡಮಿ ಲಾಹೋರ್)

ಹಝ್ರ್‌ರತ್ ಬರಾ ವರದಿ ಮಾಡುತ್ತಾರೆ: ನಾನು ಹಝ್ರ್‌ರತ್ ಅಬೂಬಕರ್(ರ)ರ ಜೊತೆಗೆ ಅವರ ಮನೆಯವರ ಬಳಿಗೆ ಒಳಗೆ ಪ್ರವೇಶಿಸಿದೆ. ಅವರ ಮಗಳಾದ ಹಝ್ರ್‌ರತ್ ಆಯಿಶ(ರ) ಮಲಗಿದ್ದರು. ಅವರಿಗೆ ಜ್ವರ ಬಂದಿತ್ತು. ಹಝ್ರ್‌ರತ್ ಅಬೂಬಕರ್(ರ) ಹಝ್ರ್‌ರತ್ ಆಯಿಶ(ರ)ರ ಮುಖವನ್ನು ಚುಂಬಿಸಿದರು ಮತ್ತು ಅವರ ಕ್ಷೇಮ ವಿಚಾರಿಸುತ್ತಾ ಎಲೈ ನನ್ನ ಮಗಳೇ, ನೀನು ಹೇಗಿದ್ದೀಯ ಎಂದು ಕೇಳಿದರು.
(ಸಹೀಹ್ ಬುಖಾರಿ, ಕಿತಾಬುಲ್ ಮನಾಖಿಬುಲ್ ಅನ್ಸಾರ್, ಹದೀಸ್-3918)

ಈ ಪ್ರಸ್ತಾಪ ಮುಂದುವರೆಯುವುದು.

*********

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು. ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್ರ್‌ರತ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರುಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಅಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಷೇಶ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ.

**(ಖುತ್‌ಬ ಜುಮುಅ, ಅಕ್ಟೋಬರ್ 22, 2010)**
**(ಇಂಚಾರ್ಜ್ ವಖ್ಫೆ ನೌ ವಿಭಾಗ ಭಾರತ)**

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರ್‌ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:-**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ-5, ಪುಟ-48-49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್-ವ-ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

## ದಿವ್ಯದೂತರು (ಮಲಾಯಿಕ)

ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."
***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

## ತಫ್ಸೀರ್ ಹಝ್ರತ್ ಮುಸ್ಲಿಹ್ ಮೌಊದ್(ರ)

**ತಯ್ಯಿಬ್ (ಪರಿಶುದ್ಧತೆಗೆ) ಆರೋಗ್ಯದ ದೃಷ್ಟಿಯಿಂದ ಉತ್ತಮವಾಗಿರು ಒಂದು ಸ್ಥಿತಿಯಾಗಿದ್ದರೆ, ಅದನ್ನು ತಿನ್ನುವುದರಿಂದ ವ್ಯಕ್ತಿಯ ಇತರ ಇಂದ್ರಿಯಗಳ ಮೇಲೆ ಪರಿಣಾಮ ಬೀರುತ್ತದೆ. ಅಥವಾ ಇತರ ಮನುಷ್ಯರ ಅಥವಾ ಇತರ ಜೀವಿಗಳ ಹಕ್ಕುಗಳನ್ನು ಹೊಡೆಯಬಾರದು, ಬದಲಿಗೆ ಇತರರ ಭಾವನೆಗಳನ್ನು ಪರಿಗಣಿಸುವುದು ಸಹ ಮುಖ್ಯವಾಗಿದೆ.**

ಸಯ್ಯಿದ್ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ಆಯತ್ 116 **ಇನ್ನಮಾ ಹರ್ರಮ ಅಲೈಕುಮುಲ್ ಮೈತತ ವದ್ದಮ ವ ಲಹ್ಮಲ್ ಖಿಂಝೀರಿ ವಮಾ ಉಹಿಲ್ಲ ಲಿಗೈರಿಲ್ಲಾಹಿ ಬಿಹೀ; ಫಮನಿಝ್‌ತುರ್ರ ಗೈರ ಬಾಗಿಂವ್ವ ಲಾ ಆದಿನ್ ಫಇನ್ನಲ್ಲಾಹ ಗಫೂರುರ್ರಹೀಮ್** (ಅನುವಾದ: ಸತ್ತಪ್ರಾಣಿ, ರಕ್ತ, ಹಂದಿಮಾಂಸ ಮತ್ತು ಅಲ್ಲಾಹೇತರ ನಾಮದಲ್ಲಿ ಅರ್ಪಿಸಲ್ಪಟ್ಟದ್ದನ್ನು ಅವನು ನಿಮಗೆ ನಿಷಿದ್ಧಗೊಳಿಸಿದ್ದಾನೆ. ಆದರೆ ಯಾರಾದರೂ ಸ್ವಯಂ ಇಚ್ಛಿಸದೆಯೂ ಮೇರೆ ಮೀರದೆಯೂ ನಿರ್ಬಂಧಿಸಲ್ಪಟ್ಟರೆ, ಆಗ ಖಂಡಿತವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ) ಇದರ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಆಹಾರ ಪದಾರ್ಥಗಳಿಗೆ ಸಂಬಂಧಿಸಿದಂತೆ ಇಸ್ಲಾಮ್ ಹಲವು ಹಂತಗಳನ್ನು ನೀಡಿದೆ ಎಂಬುದು ಸತ್ಯವಾಗಿದೆ. ಹರಾಮ್ (ಧರ್ಮಬಾಹಿರ), ಮಮ್‌ನೂ (ನಿಷೇಧಿತ), ಹಲಾಲ್ (ಧರ್ಮಸಮ್ಮತವಾದ), ತಯ್ಯಿಬ್ (ಪರಿಶುದ್ಧ) ಎಂದು. ಪವಿತ್ರ ಖುರ್‌ಆನ್‌ನಿಂದ ನಿಷಿದ್ಧವಾದದ್ದು ನಿಷಿದ್ಧ. ಪವಿತ್ರ ಖುರ್‌ಆನ್‌ನಲ್ಲಿ ಹೇಳಲಾದ ತತ್ವದ ಪ್ರಕಾರ ಪ್ರವಾದಿ(ಸ) ಅವರಿಂದ ನಿಷೇಧಿಸಲ್ಪಟ್ಟ ಅಥವಾ ನಂತರ ತಿಳಿದಿರುವ ಯಾವುದೋ ವಸ್ತುವಿನ ಬಗ್ಗೆ ಶಂಶೋಧನೆ ನಡೆಸಿ ಮುಸ್ಲಿಮರು ನಂತರ ಅದನ್ನು ಅನಪೇಕ್ಷಿತವೆಂದು ಘೋಷಿಸಿರುವುದು.

ಹಲಾಲ್– ಅದು ತನ್ನ ಮೂಲ ಸ್ವರೂಪದ ದೃಷ್ಟಿಯಿಂದ ಪರಿಶುದ್ಧವಾಗಿರುವುದು.

ತಯ್ಯಿಬ್ – ತನ್ನ ಪ್ರಸ್ತುತ ಸ್ಥಿತಿಯಲ್ಲಿಯೂ ತಯ್ಯಿಬ್ ಆಗಿರುವುದು. ಅಂದರೆ, ಯಾವುದೇ ಸಂದರ್ಭದಲ್ಲಿ ತಿನ್ನಲು ಅನುಮತಿಸುವ ಎಲ್ಲವನ್ನೂ ಹಲಾಲ್ ಎಂದು ಕರೆಯಲಾಗುತ್ತದೆ, ಉದಾಹರಣೆಗೆ ಮೇಕೆ ಹಲಾಲ್ ಆಗಿದೆ. ಆದರೆ ಇದನ್ನು ಹಸಿ ಮಾಂಸದ ರೂಪದಲ್ಲಿ ತಿನ್ನಲು ಸಾಧ್ಯವಿಲ್ಲದ ಕಾರಣ, ಈ ಸಂದರ್ಭದಲ್ಲಿ ಅದು ತಯ್ಯಿಬ್ ಆಗುವುದಿಲ್ಲ. ಆದರೆ ಇದನ್ನು ಬೇಯಿಸಿ ತಿಂದರೆ ತಯ್ಯಿಬ್ ಆಗಿರುತ್ತದೆ.

ತಯ್ಯಾಬ್‌ನಿಂದ ಹಲಾಲ್ ಆಗುವ ಅತ್ಯುತ್ತಮ ಆಹಾರವು ಹಲಾಲ್ ಆಗಿದೆ, ನಂತರ ನಿಷಿದ್ಧವಾದ ಇತರ ಪದಾರ್ಥಗಳಿವೆ, ಅವುಗಳನ್ನು ತಿನ್ನುವುದು ಸರಿಯಲ್ಲ. ಉದಾಹರಣೆಗೆ, ಕಾಲರಾ ದಿನಗಳಲ್ಲಿ ಸೌತೆಕಾಯಿ ತಿನ್ನುವುದನ್ನು ವೈದ್ಯರು ನಿಷೇಧಿಸಿದರೆ, ಸೌತೆಕಾಯಿಯು ಸಾಮಾನ್ಯ ದಿನಗಳಲ್ಲಿ ಹಲಾಲ್ ಮತ್ತು ತಯ್ಯಿಬ್ ಆಗಿದ್ದರೂ, ಆ ದಿನಗಳಲ್ಲಿ ಅದು ಹಲಾಲ್ ಆಗಿರುತ್ತದೆ ಆದರೆ ತಯ್ಯಿಬ್ ಆಗಿರುವುದಿಲ್ಲ. ಹರಮ್ ನಂತರದ ಪದಾರ್ಥಗಳು, ಅಂದರೆ ನಿಷಿದ್ಧವಾದ ಪದಾರ್ಥಗಳ ಬಗ್ಗೆಯೂ ಹೇಳುತ್ತೇವೆ, ಅವುಗಳನ್ನು ತಿನ್ನುವುದು ಸರಿಯಲ್ಲ, ಅಂದರೆ, ಅವುಗಳನ್ನು ತಿನ್ನುವುದು ವ್ಯಕ್ತಿಗೆ ಹಾನಿಯನ್ನುಂಟು ಮಾಡುತ್ತದೆ.

ಅಲ್ಲಾಹನು ವಿವಿಧ ಕಾರ್ಯಗಳಿಗಾಗಿ ವಿವಿಧ ಪ್ರಾಣಿಗಳನ್ನು ಸೃಷ್ಟಿಸಿದ್ದಾನೆ ಎಂಬುದನ್ನು ನೆನಪಿನಲ್ಲಿಡಬೇಕು. ಸೌಂದರ್ಯಕ್ಕಾಗಿ ಕೆಲವು ಜೀವಿಗಳನ್ನು ಸೃಷ್ಟಿಸಿದ್ದಾನೆ ಅವು ಸುಂದರವಾಗಿ ಕಾಣುತ್ತದೆ. ಕೆಲವು ಸುಂದರ ಧ್ವನಿಗೆ ಕಾರಣವಾದ್ದರಿಂದ, ಅದರ ಧ್ವನಿ ತುಂಬಾ ಚೆನ್ನಾಗಿರುತ್ತದೆ. ಕೆಲವು ತಿನ್ನುವುದಕ್ಕೆ, ಅದರ ಮಾಂಸ ಚೆನ್ನಾಗಿರುತ್ತದೆ. ಕೆಲವು ಔಷಧಿಗಾಗಿ, ಅದು ತನ್ನ ದೇಹದಲ್ಲಿರುವ ರೋಗನಿರೋಧಕ ಶಕ್ತಿಯಿಂದ ಆರೋಗ್ಯವನ್ನು ಕೊಡುವ ಶಕ್ತಿಯ ಹೊಂದಿರುತ್ತದೆ. ಕೇವಲ ಹಲಾಲ್ ಪ್ರಾಣಿಗಳು ಎಂದು ನೋಡಿ ಅದನ್ನು ತಿನ್ನಬಾರದು. ಕೆಲವೊಮ್ಮೆ ಪ್ರಾಣಿಗಳ ಮಾಂಸವು ಆರೋಗ್ಯಕ್ಕೆ ಹಾನಿಕಾರಕವಾಗದಿದ್ದರು, ಉದಾಹರಣೆಗೆ, ಮಾನವರಲ್ಲಿ ರೋಗವನ್ನು ಉಂಟುಮಾಡುವ, ಕೆಲವು ಬೆಳೆಗಳು ಅಥವಾ ಮನುಷ್ಯರಲ್ಲಿ ರೋಗಗಳನ್ನುಂಟು ಮಾಡುವ ಕೆಲವು ಜೀವಿಗಳನ್ನು ಸೇವಿಸಿದರೆ ಅದರ ಮಾಂಸವು ಹಲಾಲ್ ಮತ್ತು ತಯ್ಯಿಬ್ ಆಗಿರುತ್ತದೆ, ಆದರೆ ಮನುಕುಲದ ಸಾಮಾನ್ಯ ಪ್ರಯೋಜನದ ದೃಷ್ಟಿಯಿಂದ ಅದರ ಮಾಂಸವು ತಯ್ಯಿಬ್ (ಪರಿಶುದ್ಧ) ಆಗಿ ಉಳಿಯುವುದಿಲ್ಲ. ಏಕೆಂದರೆ ಜನರು ಅದನ್ನು ತಿನ್ನುವುದರಿಂದ ಕೆಲವು ಪ್ರಯೋಜನಗಳಿಂದ ವಂಚಿತರಾಗುತ್ತಾರೆ.

ನನ್ನ ಬಾಲ್ಯದಲ್ಲಿ ನನಗೆ ಈ ಪಾಠವನ್ನು ಕಲಿಸಲಾಯಿತು. ನಾನು ಒಮ್ಮೆ ಬಾಲ್ಯದಲ್ಲಿ ಒಂದು ಗಿಳಿಯನ್ನು ಬೇಟೆಯಾಡಿದ್ದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಅದನ್ನು ನೋಡಿ ಹೇಳಿದರು ಮಹ್ಮೂದ್!! ಇದರ ಮಾಂಸವನ್ನು ನಿಷೇಧಿಸಲಾಗಿಲ್ಲ, ಆದರೆ ಅಲ್ಲಾಹನು ಪ್ರತಿಯೊಂದು ಪ್ರಾಣಿಯನ್ನು ತಿನ್ನಲು ಸೃಷ್ಟಿಸಲಿಲ್ಲ. ಕೆಲವು ಸುಂದರವಾದ ಪ್ರಾಣಿಗಳು ಕಣ್ಣುಗಳನ್ನು ಮೆಚ್ಚಿಸಲು ನೋಡಲು ಉದ್ದೇಶಿಸಲಾಗಿದೆ. ಕೆಲವು ಪ್ರಾಣಿಗಳಿಗೆ ಸುಂದರವಾದ ಧ್ವನಿಯನ್ನು ನೀಡಲಾಗಿದೆ, ಇದರಿಂದಾಗಿ ಕಿವಿಯು ಅವುಗಳ ಧ್ವನಿಯನ್ನು ಕೇಳಲು ಆನಂದಿಸುತ್ತದೆ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ಮಾನವನ ಪ್ರತಿಯೊಂದು ಇಂದ್ರಿಯಗಳಿಗೂ ಅನುಗ್ರಹಗಳನ್ನು ಸೃಷ್ಟಿಸಿದ್ದಾನೆ, ಅವುಗಳನ್ನು ಕಿತ್ತು ನಾಲಿಗೆಗೆ ಮಾತ್ರ ನೀಡಬಾರದು. ನೋಡಿ ಮರದ ಮೇಲೆ ಕುಳಿತಿರುವ ಈ ಗಿಳಿಯು ಎಂತಹ ಸುಂದರವಾದ ಪ್ರಾಣಿಯಾಗಿದೆ ನೋಡುಗರಿಗೆ ಎಷ್ಟು ಉತ್ತಮವಾಗಿದೆ ಎಂದು ಗೋಚರವಾಗುತ್ತದೆ.

ಆದುದರಿಂದ ತಯ್ಯಾಬ್ ಆಗಿರುವುದು ಆರೋಗ್ಯದ ದೃಷ್ಟಿಯಿಂದ ಚೆನ್ನಾಗಿರಬೇಕೆನ್ನುವ ಷರತ್ತಾದರೂ, ಇದನ್ನು ತಿನ್ನುವುದರಿಂದ ಇತರ ಮನುಷ್ಯರ ಇಂದ್ರಿಯಾಗಳು ಅಥವಾ ಇತರ ಮನುಷ್ಯರ ಅಥವಾ ಇತರ ಜೀವಿಗಳ ಹಕ್ಕನ್ನು ಹೊಡೆಯಬಾರದು ಎಂಬ ಷರತ್ತು ಕೂಡ ಇದೆ. ಬದಲಿಗೆ, ಇತರರ ಭಾವನೆಗಳನ್ನು ಸಹ ಗಣನೆಗೆ ತೆಗೆದುಕೊಳ್ಳುವುದು ಸಹ ಮುಖ್ಯವಾಗಿದೆ. ಆದ್ದರಿಂದ, ಪವಿತ್ರ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳುತ್ತಾರೆ, **□ಹಾ ಇಸ್ತಖ್ಬಸತ್‌ಹು ಅಲ್–ಅರಬು ಫಹುವ ಹರಾಮುನ್"** (ರೂಹ್ ಅಲ್–ಮಾನಿ, ಸಂಪುಟ–2) ಅಂದರೆ, ಅರಬ್ಬರು ಕೆಟ್ಟ ಆಹಾರವೆಂದು ಪರಿಗಣಿಸುವುದನ್ನು ನಿಷೇಧಿಸಲಾಗಿದೆ. ಇಲ್ಲಿ ಹರಾಮ್ ಎಂದರೆ ಅದನ್ನು ತಿನ್ನುವವನು ದೇವರ ದೃಷ್ಟಿಯಲ್ಲಿ ಪಾಪಿ ಎಂದು ಅರ್ಥವಲ್ಲ, ಆದರೆ ಅರಬ್ಬರ ಮುಂದೆ ಅವನು ಅದನ್ನು ತಿನ್ನಬಾರದು ಎಂದರ್ಥ, ಏಕೆಂದರೆ ಈ ರೀತಿಯಾಗಿ ಅವರ ನಡುವಿನ ಸಂಬಂಧಗಳು ಹದಗೆಡುತ್ತವೆ. ಪ್ರಸ್ತುತ ಭಾರತದಲ್ಲಿ ಗೋಮಾಂಸದ ವಿಷಯವೂ ಇದೇ ಆಗಿದೆ. ಮುಸ್ಲಿಮರು ಹಿಂದೂಗಳ ಮುಂದೆ ಗೋಮಾಂಸ ತಿನ್ನದಂತೆ ಎಚ್ಚರಿಕೆ ವಹಿಸಬೇಕು ಮತ್ತು ಅವರ ಮುಂದೆ ಅದನ್ನು ಉಲ್ಲೇಖಿಸಬಾರದು ಏಕೆಂದರೆ ಅದು ಅವರಿಗೆ ನೋವುಂಟುಮಾಡುತ್ತದೆ. **(ತಫ್ಸೀರ್ ಕಬೀರ್, ಸಂಪುಟ–4, ಪುಟ–262, ಪ್ರಕಟಿತ ಖಾದಿಯಾನ್ 2010)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್(ಅತಬಅ)ರವರ ಹೊಸ ಖುತ್‌ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಸಂದರ್ಭದಲ್ಲಿ ಹೇಳಿದರು.

ಈ ಸ್ಥಳದ ಕುರಿತು ಅಲ್ಲಾಹನು ಹೇಳಿದನು. ನಾನು ಇದನ್ನು ಬೈತುಲ್‌ಹರಾಮ್, ಬೈತುಲ್ ಮುಖದ್ದಸ್ ಅಥವಾ ಮಕ್ಕ ಮದೀನ ರೀತಿಯಲ್ಲಿ ಗೌರವ ನೀಡುತ್ತೇನೆ.......ಆದುದರಿಂದ ಇಲ್ಲಿನ ಇಟ್ಟಿಗೆಗಳು ಮಾನವ ಜೀವಗಳಿಂದಲೂ ಅಮೂಲ್ಯವಾಗಿವೆ. ಇಲ್ಲಿಯ ಪವಿತ್ರ ಸ್ಥಳಗಳ ಸುರಕ್ಷತೆಗಾಗಿ ಸಾವಿರಾರು ಅಹ್ಮದಿಗಳ ಜೀವಗಳು ಬಲಿಯಾದರೂ ಸಹ ಅದರ ಬೆಲೆ ಒಬ್ಬ ಕೋಟ್ಯಾಧಿಪತಿಗೆ ಒಂದು ಪೈಸೆಗಿದ್ದಷ್ಟು ಸಹ ಇರಲಿಕ್ಕಿಲ್ಲ. (ಖುತುಬಾತೆ ಮಹ್ಮೂದ್, ಸಂಪುಟ–15, ಖುತ್ಬ ಜುಮುಅ 7–12–1934)

**ಮುತ್ತಖಿ (ಧರ್ಮನಿಷ್ಠಾವಂತ) ಆಗಲು ಅಲ್ಲಾಹನ ಪವಿತ್ರ ಸ್ಥಳಗಳಿಗೆ ಗೌರವ ಆದರ ನೀಡುವುದು ಅವಶ್ಯವಾಗಿದೆ.**

ಶಾಇರಲ್ಲಾಹ್‌ದ ಗೌರವ ಮತ್ತು ಅದರ ಆದರಗಳ ಬಗ್ಗೆ ಅಲ್ಲಾಹನು ಹೇಳಿದನು.

**ವಮೈಂ ಯುಅಝ್ಝಿಮ್ ಶಆಇರಲ್ಲಾಹಿ ಫಇನ್ನಹಾ ಮಿನ್ ತಖ್ವಲ್ ಖುಲೂಬ್** (ಸೂರತುಲ್‌ಹಜ್ಜ್–33).

ಹಾಗೆಯೇ ಯಾರಾದರೂ ಅಲ್ಲಾಹನ ಪವಿತ್ರ ಕುರುಹುಗಳನ್ನು ಗೌರವಿಸಿದರೆ ಖಂಡಿತವಾಗಿಯೂ ಅದು ಹೃದಯಗಳ ಭಯಭಕ್ತಿಯ ಕಾರಣದಿಂದಾಗಿದೆ. ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿಯುತ್ತಾರೆ.

ಈ ವಚನದಲ್ಲಿ **ವಮೈಂ ಯುಅಝ್ಝಿಮ್ ಶಆಇರಲ್ಲಾಹಿ ಫಇನ್ನಹಾ ಮಿನ್ ತಖ್ವಲ್ ಖುಲೂಬ್** ಅಲ್ಲಾಹನು, ತನ್ನ ಕುರುಹುಗಳನ್ನು ಗೌರವಿವುಸುವುದು ಹೃದಯಗಳ ಭಯಭಕ್ತಿಯ ಕಾರಣದಿಂದಾಗಿದೆ ಎಂದು ಹೇಳಿರುವನು. ಅಂದರೆ ಭಯಭಕ್ತಿಯುಳ್ಳವನಿಗೆ (ಮುತ್ತಖಿಗೆ) ಅಲ್ಲಾಹನ ಕುರುಹುಗಳನ್ನು ಗೌರವಿಸುವುದು ಅವಶ್ಯವಾಗಿದೆ. ಏಕೆಂದರೆ ಅದು ಅಲ್ಲಾಹನ ಅಸ್ತಿತ್ವವನ್ನು ದೃಢಪಡಿಸುತ್ತದೆ. ಅಲ್ಲಾಹನ ಕುರುಹುಗಳನ್ನು ಗೌರವಿಸುವುದು, ಆದರಿಸುವುದರಲ್ಲಿಯೇ ಮನುಷ್ಯ ಹಿತ ಅಡಗಿದೆ. ಯಾವಾಗಲೂ ಅದರ ಗೌರವ ಕಾಪಾಡಬೇಕು. ಇಲ್ಲದಿದ್ದರೆ ಅವನ ವಿಶ್ವಾಸ ಸುರಕ್ಷಿತವಾಗಿರಲಾರದು.

ಯೋಚಿಸಬೇಕಾಗಿದೆ ನಾವು ನಮ್ಮ ಸಂಬಂಧಿಕರನ್ನು ಭೇಟಿಯಾಗಲು, ಸುಂದರ ಸ್ಥಳಗಳನ್ನು ಸಂದರ್ಶಿಸಲು ಮತ್ತು ಇತರ ಕಾರಣಗಳಿಂದ ಪ್ರವಾಸಗಳನ್ನು ಕೈಗೊಳ್ಳುತ್ತೇವೆ. ದೂರದೂರದ ಪ್ರವಾಸ ಕೈಗೊಳ್ಳುತ್ತೇವೆ. ಅದಕ್ಕಾಗಿ ಹಣ ಖರ್ಚು ಮಾಡುತ್ತೇವೆ. ಕಷ್ಟಗಳನ್ನು ಸಹಿಸಿಕೊಳ್ಳುತ್ತೇವೆ. ಆದರೆ ನಮ್ಮ ಹೃದಯಗಳಲ್ಲಿ ಪವಿತ್ರ ಸ್ಥಳಗಳ ಮತ್ತು ಅಲ್ಲಾಹನ ಕುರುಹುಗಳ ದರ್ಶನದ ಬಗ್ಗೆ ಭಾವನೆ ಮೂಡಲಿಲ್ಲ ಎಂದರೆ, ಆಸಕ್ತಿ ಮೂಡಲಿಲ್ಲ ಎಂದರೆ ನಮ್ಮ ಹೃದಯಗಳಲ್ಲಿ ಆ ಬಗ್ಗೆ ಗೌರವವೇ ಇಲ್ಲ ಎಂದಾಗುತ್ತದೆ. ಆದುದರಿಂದ ಅಲ್ಲಾಹನ ಕುರುಹುಗಳನ್ನು ಗೌರವಿಸುವುದೆಂದರೆ ಅದನ್ನು ಸಂದರ್ಶಿಸುವುದಾಗಿದೆ ಮತ್ತು ಸಂದರ್ಶನದ ಆಸಕ್ತಿ ಹಾಗೂ ಹೃದಯಗಳಲ್ಲಿ ಭಾವುಕತೆ ಇರಬೇಕಾಗುತ್ತದೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಯ ಮೇರೆಗೆ ಎಲ್ಲ ಅಹ್ಮದಿಯರು ವರ್ಷದಲ್ಲಿ ಒಮ್ಮೆಯಾದರೂ ಜಲ್ಸದ ಸಂದರ್ಭದಲ್ಲಿ ಅವಶ್ಯವಾಗಿ ಖಾದಿಯಾನಿಗೆ ಬರಬೇಕಾಗಿದೆ.

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಡಿಸೆಂಬರ್ 1934ರ ಜಲ್ಸ ಸಾಲಾನ ಕುರಿತ ಕುತುಬಾದಲ್ಲಿ ಖಾದಿಯಾನ್‌ನವರಿಗೆ ಜಲ್ಸಕ್ಕೆ ಬರುವ ಅತಿಥಿಗಳನ್ನು ಎಲ್ಲ ರೀತಿಯಿಂದ ಸತ್ಕರಿಸಲು ಉಪದೇಶ ನೀಡಿದ ನಂತರ ವಿವಿದ ಜಮಾಅತುಗಳ ಬಂಧುಗಳಿಗೆ ಹೇಳಿದರು. ತಾವು ಈ ಮಾತನ್ನು ನೆನಪಿಡಬೇಕು. ಶತ್ರುಗಳು ಸಹ ಇಲ್ಲಿ ಬಂದು ಖಾದಿಯಾನಿನ ಘನತೆ ಗೌರವ ನೋಡಬಯಸುತ್ತಾರೆ. ಆದುದರಿಂದ ಶತ್ರುಗಳಿಗೆ ಸಂದೇಶ ನೀಡಬೇಕು. ನಾವು ಬೆದರಿಕೆಗಳಿಂದ ಹೆದರುವವರಲ್ಲ, ಮತ್ತು ಕೇಂದ್ರಕ್ಕೆ ಬರಲು ಆಸಕ್ತಿ ಹೊಂದಿದವರಾಗಿದ್ದೇವೆ. ತಾವು ಜಲ್ಸ ಸಂದರ್ಭದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಖಾದಿಯಾನಿಗೆ ಬಂದು ಸಾಬೀತುಪಡಿಸಬೇಕು. ಸತ್ಯವಿಶ್ವಾಸಿಗಳನ್ನು ಅಲ್ಲಾಹನಿಂದ ಎಷ್ಟು ದೂರ ಮಾಡಲು ಬಯಸುವಿರೋ ಅಷ್ಟೇ ಹೆಚ್ಚು ಆಸಕ್ತಿಯಿಂದ ಅವರು ಅವನೆಡೆ ಒಲವು ತೋರುತ್ತಾರೆ. ಅರಬಿಯಲ್ಲಿ ಹೇಳುತ್ತಾರೆ. 'ಅಲ್‌ಇನ್ಸಾನು ಹದೀಸುನ್ ಅಲಾ ಮಾ ಮುನಿಅ' ಮನುಷ್ಯನಿಗೆ ಯಾವ ವಸ್ತುವಿನಿಂದ ನಿಷೇಧ ಹೇರುವರೋ ಅಷ್ಟೇ ಅದರತ್ತ ಆಕರ್ಷಿತನಾಗುತ್ತಾನೆ. ಹಾಗೆ ಲೌಕಿಕತೆಯ ಬಗ್ಗೆ ಮಾನವ ಗುಣ ಹೀಗಿದ್ದರೆ, ವಿಶ್ವಾಸಿಯೊಬ್ಬನಿಗೆ ಅಲ್ಲಾಹನಿಂದ ತಡೆ ಒಡ್ಡಿದರೆ ಅದನ್ನು ವಿವರಿಸಲು ಇಷ್ಟೆಲ್ಲ ಉತ್ತೇಜನ ಇರಲಿಕ್ಕಿಲ್ಲ. ಆದುದರಿಂದ ಶತ್ರುಗಳಿಗೆ ತಮ್ಮ ನಡತೆಯಿಂದ ಸಾದರಪಡಿಸಿ ನೀವು ಎಷ್ಟೆಲ್ಲ ನಮಗೆ ಖಾದಿಯಾನಿಗೆ ಬರಲು ತಡೆಯುವಿರೋ ನಾವು ಅಷ್ಟೇ ಹುಮ್ಮಸ್ಸಿನಿಂದ ಬರುವೆವು. ಕೂಡಿಕೊಂಡು ಬರುವೆವು. ನಾವು ನಿಮ್ಮ ಬೆದರಿಕೆಯಿಂದ ಹೆದರುವುದಿಲ್ಲ. ನಾವು ಎಲ್ಲವನ್ನು ಸಹಿಸಿ ಅಲ್ಲಾಹನ ಅನುಗ್ರಹ ಪಡೆಯಲು ಈ ಸ್ಥಳಕ್ಕೆ (ಖಾದಿಯಾನಿ)ಗೆ ಬರುವೆವು. (ಖುತ್ಬಾತೆ ಮಹ್ಮೂದ್, ಸಂಪುಟ–15, ಖುತ್ಬ ಜುಮುಅ 14–12–1934)

ಹಾಗೆ ಅಲ್ಲಾಹನು ಭಾರತದ ಅಹ್ಮದಿಯರಿಗೆ ಈ ಭಾಗ್ಯ ದಯಪಾಲಿಸಲಿ, ಅವರು ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಲೀಫರುಗಳ ಕರೆಗೆ ಓಗೊಟ್ಟು ಅಧಿಕ ಸಂಖ್ಯೆಯಲ್ಲಿ ಖಾದಿಯಾನ್ ಬರುವಂತಾಗಲಿ ಮತ್ತು ತಮ್ಮ ಹಾಗೂ ತಮ್ಮ ಪೀಳಿಗೆಗೆ ಇಹ–ಪರ ಎರಡರ ಸಫಲತೆ ಯಶಸ್ವಿಯ ಮಾರ್ಗಗಳನ್ನು ತೋರುವವರಾಗಲಿ. ಅಮೀನ್ **(ಮನ್ಸೂರ್ ಅಹ್ಮದ್ ಮಸ್ರೂರ್)**

## ಮಹೋನ್ನತನಾದ ದೇವ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ." ***(ಕಿಶ್ತೀ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 21 – 22)***

## ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ–3, ಪುಟ–284)** **(ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ಸಂಪುಟ–1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**
MUSLIM TELEVISION AHMADIYYA INTERNATIONAL
www.mta.tv

*(ಪುಟ ಸಂಖ್ಯೆ 12ರ ಉಳಿದ ಭಾಗ)*

"ಮಸ್ಜಿದ್ ಫತ್ಹೇ ಅಝೀಮ್" ನಲ್ಲಿ ಬಂದು ಫಜರ್ ನಮಾಝ್ ನಿರ್ವಹಿಸಿಕೊಟ್ಟರು.

ನಮಾಝ್ ಆದ ನಂತರ ಹುಝೂರ್ ಅನ್ವರ್(ಅಬಅ) ತಮ್ಮ ವಸತಿಯತ್ತ ತೆರಳಿದರು. ಮುಂಜಾನೆ ಹುಝೂರ್ ಅನ್ವರ್(ಅಬಅ) ವಿವಿಧ ಕಚೇರಿ ಕಾರ್ಯಗಳನ್ನು ನೆರವೇರಿಸುವುದರಲ್ಲಿ ತಲ್ಲೀನರಾದರು. ಕಾರ್ಯಕ್ರಮದನ್ವಯ 11 ಗಂಟೆಗೆ ಹುಝೂರ್ ಅನ್ವರ್(ಅಬಅ) ತನ್ನ ಕಚೇರಿಗೆ ಆಗಮಿಸಿ ಕುಟುಂಬಾಧಾರಿತ ಭೇಟಿಗಳನ್ನು ಪ್ರಾರಂಭಿಸಿದರು.

**ಕುಟುಂಬಗಳ ಭೇಟಿ ಮತ್ತು ಅನಿಸಿಕೆಗಳು**

ಇಂದು ಮುಂಜಾನೆ ಈ ಅಧಿವೇಶನದಲ್ಲಿ 42 ಕುಟುಂಬಗಳ 186 ಜನರು ತನ್ನ ಪ್ರೀತಿಯ ಇಮಾಮರೊಂದಿಗೆ ಭೇಟಿಯಾಗುವ ಭಾಗ್ಯ ಪಡೆದರು. ಇವೆಲ್ಲ ಕುಟುಂಬಗಳು ಹುಝೂರ (ಅತಬಅ) ಅವರ ಜೊತೆ ಚಿತ್ರ ತೆಗೆಯಿಸಿಕೊಂಡರು. ಹುಝೂರ್ ಅನ್ವರ್ ಪ್ರೀತಿಪೂರ್ವಕವಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಪೆನ್ನು (ಲೇಖನಿ) ನೀಡಿದರು. ಮತ್ತು ಸಣ್ಣ ವಯಸ್ಸಿನ ಬಾಲಕ ಬಾಲಕಿಯರಿಗೆ ಚಾಕ್ಲೇಟ್ ನೀಡಿದರು.

ಇಂದು Zion ಜಮಾಅತ್ ಅಲ್ಲದೇ.

Detroit, Miami, Los Angeles, Chicago, Sacramneto, Dayton, Minnesota, Silicon valley, Georgia, Milwaukee, Oshkosh, St. Louis, Kansas city, Austin ಜಮಾಅತುಗಳಿಂದ ಬಂದಿರುವ ಜಮಾಅತ್ ಬಾಂಧವರು ಮತ್ತು ಕುಟುಂಬಗಳು ಭೇಟಿಯಾಗುವ ಭಾಗ್ಯ ಪಡೆದರು.

ಕೆಲ ಬಾಂಧವರು ಬಹುದೂರದ ಸ್ಥಳಗಳಿಂದ ಸುದೀರ್ಘವಾದ ಪ್ರಯಾಣವನ್ನು ಬೆಳೆಸಿ ಭೇಟಿ ಮಾಡಲು ತಲುಪಿದ್ದರು. ಕೆನ್ಸಾಸ್‌ನಿಂದ ಬರುವ ಕುಟುಂಬಗಳು 556 ಮೈಲು, ಜಾರ್ಜಿಯದಿಂದ ಬರುವವರು 748 ಮೈಲು, ಲಾಸ್ ಎಂಜಲೀಸ್‌ನಿಂದ ಬರುವ ಕುಟುಂಬಗಳು 2046 ಮೈಲಿನ ಸುದೀರ್ಘವಾದ ಪ್ರಯಾಣ ಕೈಗೊಂಡು ಇಲ್ಲಿ ತಲುಪಿದ್ದರು.

ಇಂದು ಭೇಟಿ ಮಾಡುವ ಕುಟುಂಬಗಳಲ್ಲಿ ಬಹುದೊಡ್ಡ ಸಂಖ್ಯೆ ಪಾಕಿಸ್ತಾನದಿಂದ ವಲಸೆ ಬಂದವರದ್ದಾಗಿತ್ತು. ಅವರು ತಮ್ಮ ಜೀವನದಲ್ಲಿ ಮೊದಲ ಬಾರಿಗೆ ಹುಝೂರ ಅವರನ್ನು ಭೇಟಿಯಾಗುತ್ತಿದ್ದರು. ಅವರ ಸಂತೋಷ ಹೇಳತೀರದ ರೀತಿಯದ್ದಾಗಿತ್ತು. ಅವರು ಹುಝೂರರ ಜೊತೆ ಕಳೆದ ಆ ಕೆಲ ಕ್ಷಣಗಳು ಅವರ ಜೀವನದ ಬಂಡವಾಳವಾಗಿತ್ತು. ಅವರಲ್ಲಿ ಪ್ರತಿಯೊಬ್ಬರು ಅನುಗ್ರಹಿತರಾಗಿ ಹೊರಬಂದರು. ಅವರ ಕಷ್ಟಕಾರ್ಪಣ್ಯಗಳು, ಸಂತಸ ನೆಮ್ಮದಿಯಲ್ಲಿ ಪರಿವರ್ತನೆಗೊಂಡವು.

ಶಿಕಾಗೋ (ಪೂರ್ವ)ದಿಂದ ಬಂದಿದ್ದವರಾದ ಅಬ್ದುನ್ನೂರ್ ಸಲ್ಮಾನ್ ಸಾಹಿಬ್ ಹೇಳುತ್ತಿದ್ದರು: ನಾನು ಭೇಟಿಯ ಅನಿಸಿಕೆಗಳು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಇದು ನನ್ನ ಜೀವನದ ಒಂದು ಅವಿಸ್ಮರಣೀಯ ಘಟನೆಯಾಗಿದೆ. ನಾನು ಹುಝೂರರ ಮುಖಚಹರೆಯಿಂದ ಪ್ರಕಾಶ ಉಮ್ಮಡಿಸುತ್ತಿದ್ದನ್ನು ಕಂಡಿದ್ದೇನೆ.

ಶಿಕಾಗೋದಿಂದ ಬಂದ ಇನ್ನೋರ್ವ ಬಂಧು ಭೇಟಿ ಮಾಡಿ ಹೊರಗೆ ಬಂದಾಗ ಅಳುತ್ತಿದ್ದರು. ಅವರ ಕಣ್ಣುಗಳಿಂದ ಕಂಬನೀರು ಸುರಿಯುತ್ತಿತ್ತು. ಅವರಿಂದ ಮಾತು ಹೊರಡುವುದೇ ಕಷ್ಟವಾಗುತಿತ್ತು. ಅವರು ಹೇಳಿದರು. ಹುಝೂರ್ ನನಗೆ ಹೇಳಿದರು. ನಮಾಝ್ ನಿರ್ವಹಿಸುತ್ತೀರಿ, ನಮಾಝ್‌ನ ಕಡೆ ಗಮನವಿರಲಿ. ಅದು ಎಲ್ಲ ಸಮಸ್ಯೆಗಳ ಪರಿಹಾರವಾಗಿದೆ.

ಓರ್ವ ಮಹಿಳೆ ಬೆನಿಷ್ ಅಹ್ಮದ್ ಸಾಹಿಬ ಹೇಳಿದರು. ಇಂದಿನ ಈ ಭೇಟಿ ನನ್ನ ಜೀವನದ ಬಹುದೊಡ್ಡ ಆಸೆಯಾಗಿತ್ತು. ಅದು ಇಂದು ಈಡೇರಿದಂತಾಗಿದೆ. ಈ ಮಾತನ್ನು ಹೇಳುತ್ತಾ ಅವರು ಅಳತೊಡಗಿದರು. ಹೇಳಿದರು. ನಾನು ಎಷ್ಟು ಅದೃಷ್ಟವಂತೆಯಾಗಿದ್ದೇನೆ. ಇಷ್ಟು ದೊಡ್ಡ ಜಮಾಅತ್‌ಯಿದೆ. ಅಲ್ಲಾಹನು ನನಗೆ ಈ ಸದಾವಾಕಾಶ ದೊರಕಿಸಿಕೊಟ್ಟಿದ್ದಾನೆ.

ಶಾಹಿದ್ ಅಹ್ಮದ್ ಸಾಹಿಬ್ ಎಂಬುವರು ಹೇಳಿದರು. ನಾನು 46 ವರ್ಷದವನಾಗಿದ್ದೇನೆ ಎಂದು ಭೇಟಿಯಾಗಿರಲಿಲ್ಲ. ನನಗೆ ನನ್ನ ಇಡೀ ಜೀವನದಲ್ಲಿ ಈ ದಿನವನ್ನು ನಿರೀಕ್ಷಿಸುತ್ತಿದ್ದೆ. ಇಂದು ನನಗೆ ಆದ ಆ ಆಧ್ಯಾತ್ಮಿಕ ಅನುಭವ ಹೇಳಲು ಅಸಾಧ್ಯ.

ಇನ್ನೊರ್ವ ಝೀರಕ್ ಮಹ್ಮೂದ್ ಸಾಹಿಬ್ ಹೇಳಿದರು. ನಾನು ತುಂಬಾ ಅದೃಷ್ಟವಂತನಾಗಿದ್ದೇನೆ. ನಾನು ಪಾಕಿಸ್ತಾನದಲ್ಲಿದದೆ. ಅಲ್ಲಾಹನು ನನಗೆ ಅಮೇರಿಕಾಕ್ಕೆ ಕರೆತಂದನು. ಮತ್ತು ಇಲ್ಲಿ ನನಗೆ ಭೇಟಿ ಮಾಡುವ ಭಾಗ್ಯ ದೊರೆಯಿತು.

ಇನ್ನೋರ್ವ ಮಿತ್ರರು ಸಯ್ಯದ್ ಜಮ್‌ಶೆದ್ ಅಲಿ ಸಾಹಿಬ್ ಭೇಟಿ ಮಾಡಿ ಹೊರಗೆ ಬಂದಾಗ ಅವರ ಕಣ್ಣುಗಳಲ್ಲಿ ಭಾಷ್ಪಗಳಿದ್ದವು. ತುಂಬಾ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು. ನಾನು ನನ್ನ ವ್ಯಾಪಾರದ ಯಶಸ್ಸಿಗಾಗಿ ಪ್ರಾರ್ಥನೆಯನ್ನು ಪಡೆದು ಬರುತ್ತಿದ್ದೇನೆ.

Zion ಜಮಾಅತಿನ ಮಿತ್ರರು ಇಜಾಝುಲ್ ಹಖ್ ಸಾಹಿಬ್ ಹೇಳಿದರು. ಹುಝೂರ್ ಅನ್ವರ್ ನನಗೆ ಹೇಳಿದರು. ಈಗ ನೀವು ಈ ಮಸೀದಿಯನ್ನು ಆಬಾದ್ ಮಾಡಬೇಕಾಗಿದೆ ಮತ್ತು ಐದು ಹೊತ್ತಿನ ನಮಾಝ್‌ಗಳಲ್ಲಿಯೂ ಗಮನ ನೀಡಬೇಕಾಗಿದೆ.

ಝ್ಯೂದ್ ಅಹ್ಮದ್ ಎಂಬ ಮಿತ್ರರು ಸ್ಯಾಕ್ರಮೆಂಡೊಯಿಂದ 2072 ಮೈಲು ದೂರದ ಪ್ರಯಾಣವನ್ನು ಬೆಳೆಸಿ ಭೇಟಿಗೋಸ್ಕರ ಬಂದಿದ್ದರು. ಅವರು ಹೇಳಿದರು. ನನಗೆ ಎಷ್ಟು ಸಂತೋಷವಗಿದೆ ಎಂದರೆ ಅದು ಹೇಳಲು ಸಾಧ್ಯವಿಲ್ಲ. ನನ್ನ ಬಳಿ ಆ ಶಬ್ದಗಳೇ ಇಲ್ಲ. ಇಂದು ನಾನು ಅಮೇರಿಕಾದಲ್ಲಿದ್ದು ಹುಝೂರರ ಕಾರಣದಿಂದಲೇ, ಹುಝೂರ್ ಪಾಕಿಸ್ತಾನದಲ್ಲಿ ನನ್ನ ಕುಟುಂಬಕ್ಕೆ ಧನಸಹಾಯ (ವಝೀಫ) ನಿಯುಕ್ತಗೊಳಿಸಿದರು. ಅದರ ಅನುಗ್ರಹದಿಂದಲೇ ನನ್ನ ನಾಲ್ಕು ಸಹೋದರರು ಡಿಗ್ರಿಗಳನ್ನು ಪಡೆದರು. ಅದೇ ವಝೀಫದಿಂದ ನಾನು ಐಟಿಯಲ್ಲಿ ಮಾಸ್ಟರ್ ಡಿಗ್ರಿ ಪಡೆದೆ. ಇಂದು ಆ ಡಿಗ್ರಿ ಪಡೆದ ಕಾರಣ ಅಮೇರಿಕಾದಲ್ಲಿ ನೌಕರಿ ಮಾಡುತ್ತಿದ್ದೇನೆ.

ಇನ್ನೊರ್ವರು ಮೇಜರ್ ನಯೀಮ್ ಅಹ್ಮದ್ ಸಾಹಿಬ್ ಶಿಕಾಗೋದಿಂದ ಬಂದಿದ್ದರು. ಹೇಳಿದರು. ನಾವು ಈ ಮಸೀದಿಯನ್ನು ನಿರ್ಮಿಸಿದದೇವೆ. ಹುಝೂರ್ ಅನ್ವರ್(ಅಬಅ) ಈ ಮಸೀದಿಯ ನಿರ್ಮಾಣ ಕುರಿತು ತುಂಬಾ ಸಂತೋಷವನ್ನು ವ್ಯಕ್ತಪಡಿಸಿದರು ಮತ್ತು ಹೇಳಿದರು. ನೀವು ಅತ್ಯಂತ ಉತ್ತಮ ಮಸೀದಿಯನ್ನು ನಿರ್ಮಿಸಿದ್ದೀರಿ. ಅತಿಥಿಗೃಹ ಮತ್ತು ಮಸೀದಿ ನಿರ್ಮಾಣದಲ್ಲಿ ಯಾವ ಕೊರತೆಯೂ ಮಾಡಲಿಲ್ಲ.

ಹಾಫಿಝ್ ಅಲಿ ಅಸ್ಗರ್ ಸಾಹಿಬ್ ಅವರು ಲಾಸ್‌ಎಂಜಿಲೀಸ್‌ನಿಂದ 2046 ಮೀಲಿನಷ್ಟು ದೂರದ ಪ್ರಯಾಣ ಬೆಳೆಸಿ ಭೇಟಿಗಾಗಿ ಬಂದಿದ್ದರು. ಅವರು ಹೇಳಿದರು. ಹುಝೂರ್ ಅನ್ವರ್(ಅಬಅ) ನನಗೆ ಉಪದೇಶ ಮಾಡಿದರು. ಹೆಚ್ಚೆಚ್ಚು ಖುರ್‌ಆನ್ ಆಲಿಸುತ್ತೀರಿ ಮತ್ತು ಪಠಿಸುತ್ತೀರಿ ಎಂದು. ಅದರಿಂದ ನೆನಪಿನಶಕ್ತಿ ವೃದ್ಧಿಸುವುದು. **(ಮುಂದುವರಿಯುವುದು)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಮೂರನೆಯದು: ನನ್ನ ಮಕ್ಕಳಿಗಾಗಿ ಅವರೆಲ್ಲರೂ ಧರ್ಮದ ಸೇವಕರಾಗಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ನಾಲ್ಕನೆಯದು: ನನ್ನ ನಿಷ್ಠಾವಂತ ಸ್ನೇಹಿತರಿಗಾಗಿ.

ಐದನೆಯದು: ಈ ಸರಪಳಿಯೊಂದಿಗೆ ಸಂಬಂಧ ಹೊಂದಿರುವ ಎಲ್ಲರಿಗೂ, ನಮಗೆ ತಿಳಿದಿರಲಿ ಅಥವಾ ಇಲ್ಲದಿರಲಿ.

**ಮಕ್ಕಳ ತರಬೇತಿ**

ಅವರು ಹೇಳಿದರು: "ಒಂದು ನಿಮಿಷವೂ ತನ್ನ ಅನುಯಾಯಿಗಳನ್ನು ನಿರ್ಲಕ್ಷಿಸುವ ವ್ಯಕ್ತಿಗೆ ಧರ್ಮಗುರುಗಳ ಪೀಠದ ಮೇಲೆ ಕುಳಿತುಕೊಳ್ಳುವುದು ಮತ್ತು ಸಂತನಾಗುವುದು ನಿಷೇಧಿಸಲಾಗಿದೆ." ಅವರು ಹೇಳಿದರು: ಮಾರ್ಗದರ್ಶನ ಮತ್ತು ನಿಜವಾದ ತರಬೇತಿಯು ಅಲ್ಲಾಹನ ಕ್ರಿಯೆಯಾಗಿದೆ. ಯಾವುದಾದರು ವಿಷಯದ ಕುರಿತು ಕಠಿಣವಾಗಿ ಬೆನ್ನಟ್ಟುವುದು ಮತ್ತು ಮಿತಿ ಮೀರಿ ಯಾವುದಾದರು ವಿಷಯದ ಬಗ್ಗೆ ಒತ್ತಾಯಿಸುವುದು, ಅಂದರೆ ಮಕ್ಕಳನ್ನು ಅಡ್ಡಿಪಡಿಸುವುದು ಮತ್ತು ಬೈಯುವುದು, ನಾವು ಮಾರ್ಗದರ್ಶನದ ಮಾಲೀಕರಾಗಿದ್ದೇವೆ ಮತ್ತು ನಮ್ಮ ಇಚ್ಛೆಗೆ ಅನುಗುಣವಾಗಿ ನಾವು ಅವರನ್ನು ದಾರಿಯಲ್ಲಿ ಮುನ್ನಡೆಸುತ್ತೇವೆ ಎಂದು ತೋರಿಸುತ್ತದೆ. ಇದು ಒಂದು ರೀತಿಯ ಗುಪ್ತ ಶಿರ್ಕ್ ಆಗಿದೆ. ಇದನ್ನು ನಮ್ಮ ಜಮಾಅತ್ತಿನವರು ತಪ್ಪಿಸಬೇಕು. ನಮ್ಮ ಮದರಸಾದಲ್ಲಿ ಹೊಡೆಯುವ ಅಭ್ಯಾಸವಿರುವ ಶಿಕ್ಷಕ, ತನ್ನ ಹೇಯ ಕೃತ್ಯವನ್ನು ನಿಲ್ಲಿಸದಿದ್ದರೆ ಸಂಪೂರ್ಣವಾಗಿ ಅವಮಾನತುಗೊಳಿಸಬೇಕೆಂದು ತಾವು ಖಂಡಿತವಾಗಿ ಹೇಳಿದ್ದೀರಿ ಮತ್ತು ಲಿಖಿತವಾಗಿ ಹೇಳಿದ್ದೀರಿ. ಅವರು ಹೇಳಿದರು: ನಾವು ನಮ್ಮ ಮಕ್ಕಳಿಗಾಗಿ ಪ್ರಾರ್ಥಿಸುತ್ತೇವೆ ಮತ್ತು ಸಾಧಾರಣವಾಗಿ ಶೈಕ್ಷಣಿಕ ನಿಯಮಗಳನ್ನು ಹಾಗೂ ಶಿಕ್ಷಣದ ಶಿಷ್ಟಾಚಾರವನ್ನು ಪಾಲಿಸುವಂತೆ ಮಾಡುತ್ತೇವೆ. ಇದಕ್ಕಿಂತ ಹೆಚ್ಚಾಗಿ ನಾವು ಏನೂ ಮಾಡಲು ಸಾಧ್ಯವಿಲ್ಲ ಮತ್ತೆ ಸರ್ವಶಕ್ತನಾದ ಅಲ್ಲಾಹನಲ್ಲಿ ನಮ್ಮ ಸಂಪೂರ್ಣ ನಂಬಿಕೆಯನ್ನು ಇರಿಸುತ್ತೇವೆ. ಯಾರಲ್ಲಿ ಸುದೈವದ ಬೀಜ ಹೊಂದಿರುತ್ತಾನೋ. ಕಾಲಾಂತರದಲ್ಲಿ ಅದು ಸಮೃದ್ಧಮಯವಾಗುತ್ತದೆ."

**(ಮಲ್‌ಫೂಝಾತ್, ಸಂಪುಟ-1, ಪುಟ-420, ಮುದ್ರಿತ ಖಾದಿಯಾನ್ 2018)**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**Love for All, Hatred for None**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.03, Thursday, 15 December 2022, Issue No. 50

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

(ಬದರ್ ಸಂಚಿಕೆ 49ರ ಉಳಿದ ಭಾಗ)

*** ಈ ಮುಬಾಹಿಲದ ಬಗ್ಗೆ ಅಮೇರಿಕದ ಜನರು ತಿಳಿದುಕೊಳ್ಳುವುದು ಏಕೆ ಮುಖ್ಯವಾಗಿದೆ ಎಂದು ಪತ್ರಕರ್ತರು ಕೇಳಿದರು.**

ಈ ಕುರಿತು ಹುಝೂರ್ ಅನ್ವರ್(ಅತಬಿಅ) ಅವರು, ಇದು ಅಮೆರಿಕದ ನಾಗರಿಕರಿಗೆ ಮಾತ್ರವಲ್ಲ, ಪ್ರತಿಯೊಬ್ಬರಿಗೂ ಮುಖ್ಯವಾಗಿದೆ. ಪ್ರತಿಯೊಬ್ಬ ಅಮೇರಿಕನ್ ಇತಿಹಾಸದಲ್ಲಿ ಆಸಕ್ತಿ ಹೊಂದಿರುವುದಿಲ್ಲ, ಆದರೆ ಕೆಲವರು ತಮ್ಮ ದೇಶದಲ್ಲಿ ವಾಸಿಸುವ ವಿಭಿನ್ನ ಜನರ ಇತಿಹಾಸ ಮತ್ತು ವಿಭಿನ್ನ ಧರ್ಮಗಳು ಮತ್ತು ಅವರ ಹಿನ್ನೆಲೆಗಳ ಬಗ್ಗೆ ಕಲಿಯಬೇಕು ಎಂದು ಯೋಚಿಸುವಷ್ಟು ಆಸಕ್ತಿ ಹೊಂದಿರುತ್ತಾರೆ. ಆದ್ದರಿಂದ ಆಸಕ್ತರು ಇಲ್ಲಿಗೆ ಬಂದು ನಮ್ಮ ಇತಿಹಾಸವನ್ನು ತಿಳಿದುಕೊಳ್ಳಬೇಕು ಮತ್ತು ಇದು ಯಾವುದೇ ಒಂದು ಧರ್ಮದ ವಿಜಯವಲ್ಲ ಬದಲಿಗೆ ಅಲ್ಲಾಹನ ನಿಜವಾದ ಸೇವಕ ಯಾರು ಮತ್ತು ಪರಸ್ಪರ ವಿರುದ್ಧವಾಗಿ ನಿಂದಿಸಬಾರದು ಎಂದು ತಿಳಿಸುವ ವಿಜಯವಾಗಿದೆ. ನಾವು ಎಲ್ಲಾ ಧರ್ಮಗಳನ್ನು ಗೌರವಿಸಬೇಕು. ಇದು ಪವಿತ್ರ ಖುರ್‌ಆನ್‌ನ ಬೋಧನೆಯಾಗಿದೆ ಮತ್ತು ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಸಂಸ್ಥಾಪಕರು ಹೇಳಿದರು: ನೀವು ಪರಸ್ಪರ ಗೌರವಿಸಬೇಕು ಮತ್ತು ಮಾನವ ಜನ್ಮದ ಮುಖ್ಯ ಉದ್ದೇಶವು ಅಲ್ಲಾಹನನ್ನು ಆರಾಧಿಸುವುದಾಗಿದೆ ಮತ್ತು ನೀವು ಯಾವುದೇ ಧರ್ಮದ ಅನುಯಾಯಿಯಾದರೂ ಸಹ ನೀವು ನಿಮ್ಮ ಈ ಮೂಲ ಉದ್ದೇಶದಂತೆ ವರ್ತಿಸಬೇಕು ಆದರೆ ದುರ್ಬಳಕೆ ಮಾಡಬಾರದು ಇತರ ಜನರ ವಿರುದ್ಧ ಕೆಟ್ಟ ಭಾಷೆ ಅಥವಾ ನಿಂದನೆ ಮಾಡಬಾರದು. ಹಾಗಾದರೆ ಈಗ ನಾವು ಈ ಇತಿಹಾಸವನ್ನು ಜನರ ಮುಂದೆ ವಿವರಿಸುತ್ತೇವೆ. ಇತಿಹಾಸ ಪ್ರಿಯರು ಮತ್ತು ಧರ್ಮಾಭಿಮಾನಿಗಳಿಗೆ ಇದು ಹೀಗೆಯೇ ಸಂಭವಿಸಿತು ಎಂದು ತಿಳಿಯುತ್ತದೆ.

*** ನಂತರ, ಪತ್ರಕರ್ತರ ಪ್ರಶ್ನೆಗೆ, ನಿಮ್ಮ ಪ್ರಕಾರ, ಜನರ ಮೇಲೆ ಈ ಮುಬಾಹಲದ ಪರಿಣಾಮಗಳೇನು?**

ಇಸ್ಲಾಂ ಧರ್ಮದ ಸಂದೇಶವನ್ನು ಸಾರುವುದು ನಮ್ಮ ಕೆಲಸ ಎಂದು ಹುಝೂರ್ ಅನ್ವರ್(ಅತಬಿಅ) ಹೇಳಿದರು ಮತ್ತು ಇಸ್ಲಾಮ್ ಧರ್ಮದಲ್ಲಿ ಯಾವುದೇ ಬಲವಂತವಿಲ್ಲ ಮತ್ತು ನೀವು ಯಾರನ್ನೂ ಅವರ ಧರ್ಮವನ್ನು ಬದಲಾಯಿಸಲು ಒತ್ತಾಯಿಸಲು ಸಾಧ್ಯವಿಲ್ಲ ಮತ್ತು ಇಸ್ಲಾಮ್ ಅನ್ನು ಸ್ವೀಕರಿಸದವರು ಕನಿಷ್ಠ ಅವರು ಅರ್ಥಮಾಡಿಕೊಳ್ಳುತ್ತಾರೆ ಎಂದು ಹೇಳಿದರು. ಇಸ್ಲಾಮ್ ಧರ್ಮವು ಒಟ್ಟಾಗಿ ಬದುಕಲು ಮತ್ತು ನಮ್ಮ ಕರ್ತವ್ಯಗಳನ್ನು ಪೂರೈಸಲು ಕೇಳುತ್ತದೆ. ಜನರನ್ನು ಅಲ್ಲಾಹನ ಬಳಿಗೆ ಕರೆದು ಅಲ್ಲಾಹನ ಬಳಿಗೆ ಕರೆತರುವುದು, ಅಲ್ಲಾಹನನ್ನು ಹೇಗೆ ಆರಾಧಿಸಬೇಕು ಮತ್ತು ಏಕೆ ಅಲ್ಲಾನನ್ನು ಆರಾಧಿಸಬೇಕು ಮತ್ತು ನಮ್ಮ ಸೃಷ್ಟಿಕರ್ತನ ಮುಂದೆ ಬಾಗುವುದು ಮತ್ತು ಈ ಉದ್ದೇಶವನ್ನು ವಿವರಿಸುವುದು ನನ್ನ ಬರುವಿಕೆಯು ಉದ್ದೇಶವಾಗಿದೆ ಎಂದು ಅಹ್ಮದಿಯಾ ಜಮಾಅತ್‌ನ ಸಂಸ್ಥಾಪಕರು ಹೇಳಿದರು. ಮತ್ತೊಂದು ಉದ್ದೇಶವೇನೆಂದರೆ ಜನರಲ್ಲಿ ಅವರ ಪರಸ್ಪರರ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದಾಗಿದೆ, ಮತ್ತು ಜನರು ಪರಸ್ಪರ ಗೌರವಿಸಬೇಕು. ಅವರು ಪರಸ್ಪರರ ಧರ್ಮವನ್ನು ಗೌರವಿಸಬೇಕು ಮತ್ತು ಇದನ್ನು ಪವಿತ್ರ ಖುರ್‌ಆನ್ ಕಲಿಸುತ್ತದೆ ಮತ್ತು ಇದನ್ನೇ ನಾವು ನಂಬುತ್ತೇವೆ ಮತ್ತು ಇದನ್ನೇ ನಾವು ಬೋಧಿಸುತ್ತೇವೆ.

*** ಆಗ ಪತ್ರಕರ್ತರು ಕೊನೆಯ ಪ್ರಶ್ನೆಯನ್ನು ಕೇಳಿದರು, ಜಗತ್ತಿನಲ್ಲಿ ಇನ್ನೂ ಯಾವುದೇ ಸಂಘಟಿತ ಧರ್ಮದ ಪಾತ್ರವಿದೆಯೇ? ಧರ್ಮವು ಶಾಂತಿಯ ಧ್ವನಿಯಾಗಬಹುದೇ?**

ಈ ಪ್ರಶ್ನೆಗೆ ಉತ್ತರವಾಗಿ ಹುಝೂರ್ ಅನ್ವರ್(ಅತಬಿಅ) ಹೇಳಿದರು: ನಾವು ಹೇಳುವುದೇನೆಂದರೆ ಧರ್ಮದ ಉದ್ದೇಶ ಯಾರನ್ನೂ ಹೆದರಿಸುವುದಲ್ಲ. ನಾನು ಮೊದಲೇ ಹೇಳಿದಹಾಗೆ ಅಹ್ಮದಿಯಾ ಸಂಸ್ಥಾಪರ ಆಗಮನದ ಮೂಲ ಉದ್ದೇಶಗಳು ಎರಡು ಇವೆ ಮತ್ತು ಅವರು ಇಸ್ಲಾಮ್ ಧರ್ಮದ ನೈಜ ಶಿಕ್ಷಣವನ್ನು ಜಿವಿತಗೊಳಿಸುವ ದಾವೆ ಮಾಡುತ್ತಾರೆ. ಮತ್ತು ಈ ಬೋಧನೆಯು ಅಲ್ಲಾಹನ ಹಕ್ಕು ಮತ್ತು ದಾಸರ ಹಕ್ಕು ಎಂಬ ಎರಡು ತತ್ವಗಳನ್ನು ಒಳಗೊಂಡಿದೆ. ಆದ್ದರಿಂದ, ನೀವು ಈ ಎರಡು ಕರ್ತವ್ಯಗಳನ್ನು ತಿಳಿದಿದ್ದರೆ, ನಮಗೆ ಭಯಪಡುವ ಅಗತ್ಯವಿಲ್ಲ. ನಾವು ಬಲವಂತ ಮಾಡುವವರಲ್ಲ. ನಾವು ಏನನ್ನು ಬೋಧಿಸುತ್ತೇವೆಯೋ ಅದನ್ನು ಪಾಲಿಸುತ್ತೇವೆ. ನಾವು ಸಮಾಜದ ಶಾಂತಿ ಕದಡುವ ಹುಚ್ಚು ಮುಲ್ಲಾಗಳಲ್ಲ ಅಥವಾ ಕಿಡಿಗೇಡಿಗಳಲ್ಲ.

ನಾವು ಶಾಂತಿಯಿಂದ ಬದುಕಬೇಕು ಮತ್ತು ನಾವು ಪರಸ್ಪರ ಗೌರವಿಸಬೇಕು ಎಂದು ಹೇಳುತ್ತೇವೆ. ಪವಿತ್ರ ಖುರ್‌ಆನ್ ಕೂಡ ನೀವು ಪರಸ್ಪರರ ಧರ್ಮವನ್ನು ಗೌರವಿಸಬೇಕು ಎಂದು ಬೋಧಿಸುತ್ತದೆ. ವಿಗ್ರಹಾರಾಧಕರ ವಿರುದ್ಧ ನೀವು ಯಾವುದೇ ಕೆಟ್ಟ ಭಾಷೆಯನ್ನು ಬಳಸಬಾರದು ಏಕೆಂದರೆ ಅವರು ಸೇಡು ತೀರಿಸಿಕೊಳ್ಳಲು ಅಲ್ಲಾಹನ ವಿರುದ್ಧ ಅದೇ ಭಾಷೆಯನ್ನು ಬಳಸುತ್ತಾರೆ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಹಾಗಾಗಿ ಭಯಪಡುವ ಅಗತ್ಯವಿಲ್ಲ.

ಹುಝೂರ್ ಅನ್ವರ್(ಅತಬಿಅ) ಹೇಳಿದರು: ಮಸೀದಿಯ ಉದ್ದೇಶ ಮತ್ತು ನಾವು ಹೇಗೆ ವಾಸಿಸುತ್ತೇವೆ, ನಾವು ಇಲ್ಲಿ ಏನು ಮಾಡಲಿದ್ದೇವೆ ಎಂಬುದರ ಬಗ್ಗೆ ನಾನು ನನ್ನ ಖುತ್‌ಬದಲ್ಲಿ ವಿವರಿಸುತ್ತೇನೆ.

ಈ ಸಂದರ್ಶನವು ಸಂಜೆ 6:20 ಕ್ಕೆ ಕೊನೆಗೊಂಡಿತು, ನಂತರ ಹುಝೂರ್ ಅನ್ವರ್(ಅತಬಿಅ) ರವರು ತಮ್ಮ ಕಚೇರಿಗೆ ಆಗಮಿಸಿ ಅಲ್ಲಿ ಕಾರ್ಯಕ್ರಮದ ಪ್ರಕಾರ ಕುಟುಂಬಸ್ತರೊಂದಿಗೆ ಭೇಟಿಯ ಕಾರ್ಯಕ್ರಮ ಪ್ರಾರಂಭವಾಯಿತು.

### ಕುಟುಂಬಗಳ ಭೇಟಿ

ಸಂಜೆಯ ಈ ಅಧಿವೇಶನದಲ್ಲಿ, 23 ಕುಟುಂಬಗಳ 152 ಜನರು ತಮ್ಮ ಪ್ರೀತಿಯ ಯಜಮಾನನನ್ನು ಭೇಟಿ ಮಾಡುವ ಹಾಗೂ ಅವರೊಂದಿಗೆ ಭಾವಚಿತ್ರ ತೆಗೆಸಿಕೊಳ್ಳುವ ಭಾಗ್ಯ ಲಭಿಸಿತು. ಹುಝೂರ್ ಅನ್ವರ್(ಅತಬಿಅ) ಅವರು ವಿದ್ಯಾರ್ಥಿಗಳಿಗೆ ಪೆನ್ನುಗಳನ್ನು ನೀಡಿದರು ಮತ್ತು ಯುವಕ-ಯುವತಿಯರಿಗೆ ಚಾಕೊಲೇಟ್ ನೀಡಿದರು.

ಇಂದು ಝಿಯಾನ್ ಜಮಾಅತ್‌ನ ಹೊರತಾಗಿ ಇಂಡಿಯಾನಾ, ಓಷ್ಕೋಶ್, ಶಿಕಾಗೋ, ಮಿಲ್ವಾಕೀ ಅಯೋವಾ, ಸಿಯಾಟಲ್ ಸಿಲಿಕಾನ್ ವ್ಯಾಲಿ

ಜಮಾಅತ್‌ಗಳಿಂದ ಬಂದ ಕುಟುಂಬಗಳನ್ನು ಭೇಟಿಯಾಗಿ ಗೌರವಿಸಲಾಯಿತು. ಕೆಲವು ಕುಟುಂಬಗಳು ತಮ್ಮ ಪ್ರೀತಿಯ ಯಜಮಾನನನ್ನು ಭೇಟಿಯಾಗಲು ಬಹಳ ದೂರ ಪ್ರಯಾಣಿಸಿದ್ದರು. ಸಿಯಾಟಲ್‌ನ ಕುಟುಂಬಗಳು 2,014 ಮೈಲುಗಳು ಮತ್ತು ಸಿಲಿಕಾನ್ ವ್ಯಾಲಿಯ ಕುಟುಂಬಗಳು 2,190 ಮೈಲುಗಳನ್ನು ಪ್ರಯಾಣಿಸಿದರು. ಭೇಟಿಯ ಈ ಕಾರ್ಯಕ್ರಮವು 8 ಗಂಟೆಯವರೆಗೆ ಮುಂದುವರೆಯಿತು. ನಂತರ ಫತ್ಹೇ ಅಝೀಮ್ ಮಸೀದಿಗೆ ಭೇಟಿ ನೀಡಿ ಮಗ್ರಿಬ್ ಮತ್ತು ಇಶಾ ನಮಾಝ್ ನಿರ್ವಹಿಸಿದರು. ನಮಾಝ್ ನಿರ್ವಹಿಸಿದ ನಂತರ ಹುಝೂರ್ ಅನ್ವರ್(ಅತಬಿಅ) ತಮ್ಮ ನಿವಾಸಕ್ಕೆ ತೆರಳಿದರು.

**28 ಸೆಪ್ಟೆಂಬರ್ ಬುಧವಾರ :**

ಹುಝೂರ್ ಅನ್ವರ್(ಅತಬಿಅ) ಮುಂಜಾನೆ 5 ಗಂಟೆ 50 ನಿಮಿಷಕ್ಕೆ

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.